ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಹೊಸಪೇಟೆ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಡಾ. ಮೃತ್ಯುಂಜಯ ರುಮಾಲೆ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**HOSPETE:** An Introducing Book on the Places in Karnataka that Played a Major Role in the Freedom Struggle, Written by Dr. Mruthyunjaya Rumale, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಮೃತ್ಯುಂಜಯ ರುಮಾಲೆ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೫೬


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತ ದೇಶ ಸ್ವತಂತ್ರಗೊಂಡು ಎಪ್ಪತ್ತನಾಲ್ಕು ಸಂವತ್ಸರಗಳನ್ನು ಪೂರೈಸಿ ಎಪ್ಪತ್ತೈದರ ಸಂವತ್ಸರಕ್ಕೆ ಪಾದ ಇಡುವ ಚಾರಿತ್ರಿಕ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಂಥ ಸೃಷ್ಟಿಶೀಲ ನೆಲೆಯ ಸಂಸ್ಥೆಯೊಂದು ತನ್ನ ಹೊಣೆಗಾರಿಕೆಯನ್ನು ಈ ರೀತಿ ಸ್ಪಂದಿಸುತ್ತಿರುವುದು ಅರ್ಥಪೂರ್ಣವಾದ ಮತ್ತು ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಸಲ್ಲಿಸುವ ಗೌರವವಾಗಿದೆ. ಹತ್ತೊಂಭತ್ತು–ಇಪ್ಪತ್ತನೆಯ ಶತಮಾನದಲ್ಲಿ ನಡೆದ ದೇಶದ ಸ್ವಾತಂತ್ರ್ಯ ಹೋರಾಟವು ನಮ್ಮ ಯುವಜನತೆಗೆ, ವಿದ್ಯಾರ್ಥಿಗಳಿಗೆ ತಿಳಿಯಬೇಕಾಗಿದೆ. ವಿದ್ಯುನ್ಮಾನವನ್ನೇ ನಂಬಿಕೊಂಡು ಬದುಕುತ್ತಿರುವ ನಮ್ಮ ಕಾಲದ ಯುವಕರು–ತೃತೀಯ ಜಗತ್ತಿನ ಪ್ರಜೆಗಳೂ ನಾಗರಿಕರೂ ಆಗಿ ನೆಲದ ಸಂಸ್ಕೃತಿಯನ್ನು ನಾಡು–ನುಡಿಯ ಬಗೆಗಿನ ಅಭಿಮಾನವನ್ನು, ಭಾರತ–ಭಾರತೀಯ ಮನೋಧರ್ಮವನ್ನು ಮೂಡಿಸಿಕೊಳ್ಳಲು ಕರ್ನಾಟಕ ಮತ್ತು ಸ್ವಾತಂತ್ರ್ಯ ಹೋರಾಟ ಎಂಬ ಈ ಮಾಲಿಕೆಯ ಪುಸ್ತಿಕೆಗಳು ನೆರವಾಗುತ್ತವೆ.

ಈ ಮಾಲಿಕೆಯಲ್ಲಿ ಪ್ರಕಟವಾಗುತ್ತಿರುವ 'ಸ್ವಾತಂತ್ರ್ಯ ಹೋರಾಟ ಮತ್ತು ಹೊಸಪೇಟೆ' ಕೃತಿಯು ಒಂದು ಸ್ಥೂಲ ಚಿತ್ರವನ್ನು ನೀಡುತ್ತಿದೆ.

ಈವರೆಗೂ ಈ ಸಂಬಂಧವಾಗಿ ಬಂದ ಕೃತಿಗಳನ್ನು ಪರಿಶೀಲಿಸಿ ಇದನ್ನು ಸಿದ್ಧಪಡಿಸಲಾಗಿದೆ. ನಾನು ಬೆಲ್ಲದ ಚೆನ್ನಪ್ಪ, ಬಿ.ಜಿ. ಗದಿಗೆಪ್ಪ, ಮುದೇನೂರ ಸಂಗಣ್ಣ–ನವರಂಥ ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರಾಸಂಗಿಕವಾಗಿ ಸಂದರ್ಶಿಸಿದ ಸಂದರ್ಭದಲ್ಲಿ ಸಂಗ್ರಹಿಸಿದ್ದ ಮಾಹಿತಿಗಳನ್ನು ಸಾಂದರ್ಭಿಕವಾಗಿ ಸೇರಿಸಿದ್ದೇನೆ. ಒಂದು ಅರ್ಥದಲ್ಲಿ ಸಾಧಾರಪೂರ್ವಕ ಮಾಹಿತಿಗಳ ಕ್ರೋಢೀಕೃತ ರೂಪವೇ ಈ ಪುಸ್ತಿಕೆ. ಪುಸ್ತಿಕೆಯ ಅಕ್ಷರ ಜೋಡಣೆ ಮಾಡಿಕೊಟ್ಟ ಶ್ರೀ ಪ್ರಕಾಶ ಗಿರಿಮಲ್ಲನವರಿಗೆ ನನ್ನ ಧನ್ಯವಾದಗಳು.

ಕರ್ನಾಟಕ ಸಾಹಿತ್ಯ ಅಕಾಡೆಮಿಯನ್ನು ಒಂದು ಖಚಿತ ಬದ್ಧತೆಯಲ್ಲಿ ಮುನ್ನಡೆಸುತ್ತಿರುವ ಅಧ್ಯಕ್ಷರಾದ ಡಾ. ಬಿ. ವಿ. ವಸಂತಕುಮಾರ್ ಅವರಿಗೂ, ರಿಜಿಸ್ಟ್ರಾರ್ ಶ್ರೀ ಕರಿಯಪ್ಪನವರಿಗೂ ಮತ್ತು ಈ ಮಾಲಿಕೆಯಲ್ಲಿ ನನ್ನೊಂದಿಗೆ ಸಂಪಾದಕರಾಗಿರುವ ಡಾ. ಎಸ್.ಜಿ.ರಾಮದಾಸರೆಡ್ಡಿ, ಡಾ. ಪ್ರಕಾಶ ಗ. ಖಾಡೆ, ಶ್ರೀ ನರೇಂದ್ರಕುಮಾರ ಮತ್ತು ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು–ಅವರಿಗೂ ನನ್ನ ಕೃತಜ್ಞತೆಗಳು.

ಹೊಸಪೇಟೆ **ಡಾ. ಮೃತ್ಯುಂಜಯ ರುಮಾಲೆ**

೫೮೩೨೦೧

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ ಮತ್ತು ಹೊಸಪೇಟೆ | ೧೫ |
| ೧೯೨೪: | ೩೫ |
| ೧೯೩೦: | ೩೬ |
| ೧೯೩೪: | ೩೯ |
| ಹೊಸಪೇಟೆಯ ಮುನ್ಸಿಪಲ್ ಹೈಸ್ಕೂಲ್ ಕಟ್ಟಡಕ್ಕೆ ಬೆಂಕಿ | ೪೭ |
| ಕೊನೆಯ ಮಾತು! | ೫೦ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೨ |

# ಸ್ವಾತಂತ್ರ್ಯ ಹೋರಾಟ ಮತ್ತು ಹೊಸಪೇಟೆ

ಮೈಸೂರು ಕೇಂದ್ರಿತ ಸಂಸ್ಥಾನವು ೧೭೬೮ರಿಂದ ೧೭೮೨ರವರೆಗೆ ಹೈದರಾಲಿಯ, ೧೭೮೨–೧೭೯೯ರ ವರೆಗೆ ಟೀಪೂವಿನ ಆಳ್ವಿಕೆಯಲ್ಲಿತ್ತು. ಆ ಕಾರಣಕ್ಕಾಗಿ ಬ್ರಿಟೀಶರ ಆಧಿಪತ್ಯ ದಕ್ಷಿಣ ಭಾರತದಲ್ಲಿ ಸಾಧಿತವಾಗಲಿಲ್ಲ. ಇದು ಅಷ್ಟಕ್ಕೆ ನಿರ್ಬಂಧಿತಗೊಂಡಿದ್ದರೆ, ರಾಜಕೀಯ ಪ್ರಮುಖ ವಿದ್ಯಮಾನಗಳು ಘಟಿಸುತ್ತಿರಲಿಲ್ಲ. ಮಹಾರಾಷ್ಟ್ರದಲ್ಲಿ ಪೇಶ್ವೆಯವರಿಗೂ, ಹೈದರಾಬಾದಿನ ನಿಜಾಮನಿಗೂ ಅಧಿಕಾರ ಮತ್ತು ರಾಜ್ಯಾಡಳಿತದ ಅಸ್ತಿತ್ವದ ಪ್ರಶ್ನೆಯೂ ಆಗಿತ್ತು. ಇದನ್ನು ತನ್ನ ರಾಜನೀತಿಯ ಒಂದು ಭಾಗವಾಗಿ ಅಧಿಕಾರ ವಿಸ್ತರಣಾಕಾಂಕ್ಷಿಗಳಾಗಿದ್ದ ಬ್ರಿಟೀಶ್ ಸರಕಾರವು ಈಸ್ಟ್ ಇಂಡಿಯಾ ಕಂಪನಿ ಮತ್ತು ಪ್ರಾವೆನ್ಸ್ ಆಡಳಿತ ವಿಭಾಗಗಳು 'ಸಹಾಯಕ ಸೈನ್ಯ ಪದ್ಧತಿ'ಯನ್ನು ಅನ್ವಯಿಸಿಕೊಂಡು ಟೀಪೂವಿನ ಮೇಲೆ ಜಂಟಿಯಾಗಿ ದಾಳಿ ಮಾಡುವ ಯೋಜನೆ ರೂಪಿಸಿದವು. ಈ ರಾಜನೀತಿಯ ಒಂದು ಅಂಗವಾಗಿದ್ದ ಈ ಯುದ್ಧತಂತ್ರವು ಗೆಲುವು ಪಡೆದ ನಂತರ ಸೋತ ರಾಜ್ಯದ ಭೌಗೋಳಿಕ ವ್ಯಾಪ್ತಿಯನ್ನು ಒಪ್ಪಂದದನ್ವಯ ಹಂಚಿಕೊಳ್ಳುವುದಾಗಿತ್ತು. ಟೀಪೂ ಬಳ್ಳಾರಿ ಪರಿಸರದವರೆಗೂ ರಾಜ್ಯವಿಸ್ತಾರ ಮಾಡಿದ್ದರಿಂದಲೂ ಕೇರಳ, ತಮಿಳು, ಉತ್ತರ ಕರ್ನಾಟಕದ ಧಾರವಾಡ, ಬೆಳಗಾವಿಗಳಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿದ್ದುದರಿಂದಲೂ, ರಾಜ್ಯದೊಳಗೇ ತಾನೇ ಉಂಟು ಮಾಡಿದ ಆವಾಹಿಸಿಕೊಂಡಿದ್ದ ರಾಜಕೀಯ ಕ್ಷೋಭೆಗಳಿಂದ ಮಾನಸಿಕವಾಗಿ ಕುಸಿದಿದ್ದರಿಂದಲೂ, ಬಳ್ಳಾರಿ ಪರಿಸರದ ಬಗ್ಗೆ ಹೆಚ್ಚು ಗಮನವಿರಿಸಿರಲಿಲ್ಲ. ಹೀಗಾಗಿ ಬ್ರಿಟೀಶ್ ಸರಕಾರ ಬಳ್ಳಾರಿ ನಗರದ ಪಶ್ಚಿಮ ಹೊಲವಲಯದಲ್ಲಿ ನಿಜಾಮನ ಸಹಯೋಗದಲ್ಲಿ

ದಂಡನ್ನು (ಸೈನಿಕರ ತುಕುಡಿ) ಇರಿಸಲಾಗಿತ್ತು. ಅದನ್ನು ದಂಡು ಪ್ರದೇಶ (Contonment area) ಎಂದೇ ಕರೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ೧೭೯೨ರಲ್ಲಿ ಈ ಭಾಗವನ್ನು (ಬಳ್ಳಾರಿ ಪರಿಸರವನ್ನು) ನಿಜಾಮನಿಗೆ ನೀಡಲಾಗಿತ್ತು.

ಮೈಸೂರಿನ ಕೊನೆಯ ಯುದ್ಧ ಮೈಸೂರು ಸಂಸ್ಥಾನಿಕರಾದ ಒಡೆಯರಿಗೂ ಟೀಪೂವಿಗೂ ಇದ್ದ ಅಂತರಸಂಬಂಧ ಕ್ಷೋಭೆಯ ವಿಷಯದಲ್ಲಿ ನಿರ್ಣಾಯಕವಾಗಿತ್ತು. ಮೈಸೂರು ಸಂಸ್ಥಾನವನ್ನು ಟೀಪೂವಿನಿಂದ ಮುಕ್ತಿಗೊಳಿಸಬೇಕಾದುದು ಈ ಸಂದರ್ಭದ ಒಂದು ಭಾಗವೂ ಆಗಿತ್ತು. ೧೭೯೯ರಲ್ಲಿ ಟೀಪೂ ಯುದ್ಧದಲ್ಲಿ ಮಡಿದ. ಮೈಸೂರು ಸಂಸ್ಥಾನವೂ ಮುಕ್ತವಾಯಿತು. ೧೮೦೦ರಲ್ಲಿ ಬಳ್ಳಾರಿ ಜಿಲ್ಲೆ ರಚನೆಯಾಯಿತು. ೧೭೯೨ರಿಂದ ೧೮೦೨ರವರೆಗೆ ನಿಜಾಮನ ವಶದಲ್ಲಿ ಈ ಭಾಗವನ್ನು ನಿಜಾಮನಿಂದ ದತ್ತು ಪಡೆದು ಬ್ರಿಟೀಶ್ ಪ್ರಾವೆನ್ಸ್ ಆಡಳಿತ ಮತ್ತು ಈಸ್ಟ್ ಇಂಡಿಯಾ ಕಂಪನಿಯು ಬಳ್ಳಾರಿ ಪರಿಸರವನ್ನು ಮದ್ರಾಸ್ ಪ್ರಾವೆನ್ಸ್‌ಗೆ ಸೇರಿಸಲಾಯಿತು. ದತ್ತು ಪಡೆದ ಜಿಲ್ಲೆಗಳನ್ನು Ceeded Districts (ದತ್ತು ಮಂಡಲ, ದತ್ತು ಜಿಲ್ಲೆಗಳು) ಎಂದು ಕರೆಯಲಾಯಿತು. Bellary (B), Ananthapur (A), Cuddapha (C) ಮತ್ತು Karnool (K)- BACK Districts ಗಳೆಂದು ಕರೆಯಲಾಗುತ್ತಿತ್ತು. ೧೮೦೦ರಲ್ಲಿ ಬಳ್ಳಾರಿ ಜಿಲ್ಲೆಯ ರಚನೆಯಾಯಿತು. ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಬಳ್ಳಾರಿ ನಗರ ಕೇಂದ್ರಿತ ಇಪ್ಪತ್ತು ತಾಲೂಕುಗಳನ್ನು (ಗುತ್ತಿ, ಯಾದಿಕಿ, ಚೆನ್ನಮ್ಮ ಪಳ್ಳಿ, ರಾಯದುರ್ಗ, ತಾಡಮಾರಿ, ತಾಡಪತ್ರಿ, ಅನಂತಪುರ, ಕೋಡಿಕೊಂಡ, ಧರ್ಮಾವರಂ, ಪೆನುಗೊಂಡ, ಮಡಕಶಿರಾ, ಕಂಪ್ಲಿ, ಹರಪನಹಳ್ಳಿ, ಹಡಗಲಿ, ಬಳ್ಳಾರಿ, ಕೂಡ್ಲಿಗಿ, ನಾಗಲದಿನ್ನೆ, ಪಂಚಪಳ್ಳಿ, ಗೂಳ್ಯಂ ಮತ್ತು ಆದವಾನಿ) ಒಳಗೊಂಡ ಜಿಲ್ಲೆಯನ್ನು ರೂಪಿಸಲಾಯಿತು. ಮದ್ರಾಸ್ ಪ್ರಾವೆನ್ಸ್ ಭಾರತ ದೇಶದ ಬಹುದೊಡ್ಡ ಬ್ರಿಟೀಶ್ ಆಡಳಿತ ಪ್ರಾವೆನ್ಸಿಯಾದರೆ, (ವಿಶಾಲ) ಬಳ್ಳಾರಿ ಜಿಲ್ಲೆಯು ಮದ್ರಾಸ್ ಪ್ರಾವೆನ್ಸಿಯ ಬಹುದೊಡ್ಡ ಜಿಲ್ಲೆಯಾಗಿತ್ತು.

ಬಳ್ಳಾರಿ ಜಿಲ್ಲೆಯು ಮದ್ರಾಸ್ ಪ್ರಾವೆನ್ಸಿಗೆ ಸೇರ್ಪಡೆಯಾದುದು ಆ ಕಾಲದ ರಾಜಕೀಯ ಸಂದರ್ಭದ ಮೂರು ಆಯ್ಕೆಗಳಲ್ಲಿ ಒಂದು. ಸಹಾಯಕ ಸೈನ್ಯಪದ್ಧತಿಯು ಬಳ್ಳಾರಿ ಪರಿಸರಕ್ಕೆ ಸಂಬಂಧಿಸಿದಂತೆ ಅನಿವಾರ್ಯವೋ ಅವಶ್ಯವೋ ಆಗಿತ್ತು ಎಂಬುದು ರಾಜಕೀಯ ವಿದ್ಯಮಾನವಾಗಿತ್ತು. ಆದರೆ ೧೭೯೯ರಲ್ಲಿ ಟೀಪೂ ತೀರಿದ ನಂತರ, ಬಳ್ಳಾರಿ ಪರಿಸರವು ನಿಜಾಮ್ ಪ್ರಾಂತಕ್ಕೆ ಸೇರಿದ್ದರೆ, ೧೯೪೮ರವರೆಗೆ ಬಳ್ಳಾರಿ ಜಿಲ್ಲೆಯು ಇತ್ತ ನಿಜಾಮನ ವಿರುದ್ಧ, ಅತ್ತ ಬ್ರಿಟೀಶರ ವಿರುದ್ಧ ಮತ್ತೊಂದೆಡೆ ಕನ್ನಡತ್ವವನ್ನು ಸ್ಥಾಪಿಸುವ ಮಹತ್ವದ ಘಟನೆಗಾಗಿ ಜಾಗೃತವಾಗುಳಿಸುವುದರ ಕಾರಣವಾಗಿ ಉರ್ದು, ತೆಲುಗು ಭಾಷಿಗರ ವಿರುದ್ಧ ಸೆಣಸಬೇಕಾಗಿತ್ತು. ಬಳ್ಳಾರಿ ಪರಿಸರವು ಮೈಸೂರು ಸಂಸ್ಥಾನಕ್ಕೆ ಸೇರಿಸಲ್ಪಟ್ಟಿದ್ದರೆ, ಮೂಲಭೂತ ಸುಖಾನುಕೂಲಗಳನ್ನು ಪಡೆದಿರಬಹುದಾಗಿತ್ತು. ಒಟ್ಟಿನಲ್ಲಿ ಬಳ್ಳಾರಿ ಜಿಲ್ಲೆ ರಚನೆಯಾಯಿತು. ವಿಶೇಷವೆಂದರೆ, ರಚನೆಯಾದ ಇಪ್ಪತ್ತು ತಾಲೂಕುಗಳಲ್ಲಿ ಹೊಸಪೇಟೆ ನಗರವು ತಾಲೂಕು ಕೇಂದ್ರವಾಗಿರಲಿಲ್ಲ. ಕಂಪ್ಲಿ ತಾಲೂಕಿನ ಒಂದು ಹೋಬಳಿಯಾಗಿತ್ತು. ಸಂಡೂರು ಸಂಸ್ಥಾನವಾಗಿದ್ದರಿಂದ ಬಳ್ಳಾರಿ ಜಿಲ್ಲಾ ಭೌಗೋಳಿಕ ವ್ಯಾಪ್ತಿಯಲ್ಲಿದ್ದರೂ ತಾಲೂಕು ಕೇಂದ್ರವಾಗಲೀ, ತಾಲೂಕು ವ್ಯಾಪ್ತಿಯ ಸ್ಥಾನವನ್ನಾಗಲೀ ಅದು ಪಡೆದಿರಲಿಲ್ಲ.

ಇಂದು ಬಳ್ಳಾರಿ ಜಿಲ್ಲೆಯ ಪ್ರಮುಖ ವಾಣಿಜ್ಯ ನಗರವಾಗಿ, ತಾಲೂಕು ಆಗಿ ಪ್ರಮುಖ ಭೌಗೋಳಿಕ ವ್ಯಾಪ್ತಿಯನ್ನು ಪಡೆದಿದೆ. ಅಷ್ಟೇ ಅಲ್ಲ; ಬಳ್ಳಾರಿ ಜಿಲ್ಲೆಯಿಂದ ಪ್ರತ್ಯೇಕಗೊಂಡ 'ವಿಜಯನಗರ'ವೆಂಬ ಹೊಸ ಜಿಲ್ಲೆಯಾಗಿ, ಜಿಲ್ಲಾ ಕೇಂದ್ರನಗರವಾಗಿ ಹೊಸಪೇಟೆ ಬೆಳೆದು ನಿಂತಿದೆ. ಹೀಗೆ ಬೆಳೆದು ಬಂದುದಕ್ಕೆ ಒಂದು ಚರಿತ್ರೆಯಿದೆ. ಅದನ್ನು ಪ್ರಾಸಂಗಿಕವಾಗಿ ಸ್ಥೂಲ ಪರಿಚಯ ಮಾಡಿಕೊಳ್ಳಬಹುದು. ಆಧುನಿಕ ರಾಜಕೀಯ ಚರಿತ್ರೆಯಲ್ಲಿ ಹೊಸಪೇಟೆಯು ಜಿಲ್ಲಾ ಕೇಂದ್ರವಾದ ಬಳ್ಳಾರಿ ನಗರಕ್ಕೆ ವ್ಯಾಪಾರ, ವಾಣಿಜ್ಯ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣಕ್ಕೆ ಸಂಬಂಧಿಸಿದಂತೆ.....

ವಿಜಯನಗರ ಸಾಮ್ರಾಜ್ಯ ಪತನಾನಂತರ ಅಸ್ತಿತ್ವಕ್ಕೆ ಬಂದ ಪಾಳೆಯ ಪಟ್ಟುಗಳಲ್ಲಿ ಬಳ್ಳಾರಿ ಪರಿಸರದಲ್ಲಿ ಹರಪನಹಳ್ಳಿ, ಬಳ್ಳಾರಿ, ಗುಡೇಕೋಟೆ ಮತ್ತು ಸಂಡೂರು ಪ್ರಮುಖವಾದವುಗಳು. ಅಂಚಿಗೆ ಅಂಟಿಕೊಂಡಿದ್ದ ಚಿತ್ರದುರ್ಗ ಪಾಳೆಯಪಟ್ಟು ಆಡಳಿತ–ಅಧಿಕಾರಕ್ಕಾಗಿ ವಿಸ್ತರಣೆಯ ಉದ್ದೇಶದಲ್ಲಿ ಹರಪನಹಳ್ಳಿಯೊಂದಿಗೆ ಪರಸ್ಪರ ಸೆಣಸಾಟ ನಡೆದೇ ಇತ್ತು. ವಿಜಯನಗರ

ಸಾಮ್ರಾಜ್ಯ ಪತನಾನಂತರ ಕಾಲದಿಂದ (೧೫೬೫) ಟೀಪೂವಿನ ನಿಧನ ವರೆಗೆ (೧೭೯೯) ಈ ಪರಿಸರ ಆಡಳಿತಾತ್ಮಕ ಉದ್ವಿಗ್ನತೆಯನ್ನು ನಿರಂತರವಾಗಿ ಹೊಂದಿತ್ತು. ಮುಖ್ಯವಾಗಿ ಹರಪನಹಳ್ಳಿ ಮತ್ತು ಚಿತ್ರದುರ್ಗದ ಪಾಳೆಯಗಾರರು ಪ್ರಬಲರಾಗಿದ್ದರು.

ಸೋಮಶೇಖರ ನಾಯಕನ ನೇತೃತ್ವದ ಹರಪನಹಳ್ಳಿ ಪಾಳೆಯಗಾರರಿಗೂ ಹಿರಿಯ ಮದಕರಿ ನಾಯಕನ ನೇತೃತ್ವದ ಚಿತ್ರದುರ್ಗದ ಪಾಳೆಯಗಾರರಿಗೂ ಮಾಯಕೊಂಡದಲ್ಲಿ ೧೭೪೮ರಲ್ಲಿ ಒಂದು ನಿರ್ಣಾಯಕ ಯುದ್ಧ ನಡೆಯಿತು. ಈ ಕಾಲಕ್ಕಾಗಲೇ ಸೋಮಶೇಖರ ನಾಯಕನು ಇಂದಿನ ಹೊಸಪೇಟೆಯ ಭಾಗದವರೆಗೆ (ಆಗಿನ್ನೂ ಹೊಸಪೇಟೆಯೆಂಬ ಊರಾಗಲೀ ಹೆಸರಾಗಲೀ ಇರಲಿಲ್ಲ) ವಶಪಡಿಸಿಕೊಂಡು ತುಂಗಭದ್ರ ಆಣೆಕಟ್ಟಿನಿಂದ ಮುಳುಗಡೆಯಾಗಿರುವ ನಾರಾಯಣ ದೇವರ ಕೆರೆ ಎಂಬ ವ್ಯಾಪಾರೀ ನಗರದಲ್ಲಿ ಬೇಸಿಗೆಯ ಅರಮನೆ ಕಟ್ಟಿಸಿಕೊಂಡಿದ್ದನು. ಈ ಭಾಗದಲ್ಲಿ ಸಂಚಾರ ಮಾಡಿಕೊಂಡಿದ್ದಾಗ, ಮಾಯಕೊಂಡದಲ್ಲಿ (೧೭೪೮ರಲ್ಲಿ) ಚಿತ್ರದುರ್ಗದ ಪಾಳೆಯಗಾರ ಹಿರಿಯ ಮದಕರಿ ನಾಯಕ ದಾಳಿ ಮಾಡಿದ ಸುದ್ದಿ ಬಂದು ತಕ್ಷಣವೇ ಕುದುರೆ ಏರಿ ಸೈನ್ಯ ಸಮೇತ ದಾಳಿ ಮಾಡುತ್ತಾನೆ. ಆ ನಿರ್ಣಾಯಕ ಯುದ್ಧದಲ್ಲಿ ಸೋಮಶೇಖರ ನಾಯಕ ವಿಜಯಶಾಲಿಯೂ ಆಗುತ್ತಾನೆ. ತಾನು ಹಂಪಿಯ ವಿರೂಪಾಕ್ಷನ ಸನ್ನಿಧಿಯಲ್ಲಿದ್ದಾಗ ಯುದ್ಧದ ಸುದ್ದಿ ಬಂದು ತಾನು ವಿಜಯಶಾಲಿಯಾಗಲು ವಿರೂಪಾಕ್ಷನ ಆಶೀರ್ವಾದ ಅನುಗ್ರಹವೇ ಕಾರಣವೆಂದು ನಂಬಿ ಆನೆ ಮೇಲೆ ಕುಳಿತು ಮೆರವಣಿಗೆ ಮಾಡಿಸಿಕೊಂಡು ವಿರೂಪಾಕ್ಷನ ದರ್ಶನ ಪಡೆಯುತ್ತಾನೆ. ಅಧಿಕಾರ–ಆಡಳಿತಗಳಿಂದ ನಿರುಮ್ಮಳನಾದ ಸೋಮಶೇಖರ ನಾಯಕನು ಎಲ್ಲಾ ಹಳ್ಳಿಗಳನ್ನು ಸೇರಿಸಿ ಕಂದಾಯಕ್ಕೆ ಅನುಕೂಲವಾಗಲೆಂದು ಆಧುನಿಕಗೊಳಿಸಿ ಅದಕ್ಕೆ “ಹೊಸಪೇಟೆ” ಎಂದು ನಾಮಕರಣ ಮಾಡುತ್ತಾನೆ. ಬಹುಶಃ ೧೭೫೦ರ ಸುಮಾರಿನಲ್ಲಿ ಈ ನಾಮಕರಣವಾಗಿರಬಹುದು! ೧೭೯೯ರಲ್ಲಿ ಟೀಪೂ ತೀರಿದ ನಂತರ ರಚನೆಯಾದ ಬಳ್ಳಾರಿ ಜಿಲ್ಲೆಯ ಇಪ್ಪತ್ತು ತಾಲೂಕುಗಳಲ್ಲಿ ಕಂಪ್ಲಿಯನ್ನು ಒಂದು ತಾಲೂಕನ್ನಾಗಿ, ಕಂಪ್ಲಿಯನ್ನೇ ತಾಲೂಕು ಕೇಂದ್ರವನ್ನೂ ಆಗಿ ಮಾಡಲಾಯಿತು.



ಬಳ್ಳಾರಿ ಜಿಲ್ಲೆಯು ಮದ್ರಾಸ್ ಪ್ರಾವಿನ್ಸ್‌ಗೆ ಸೇರಿದ ನಂತರ ಆಡಳಿತಾತ್ಮಕ ಸುಧಾರಣೆಗಳನ್ನೂ ಮಾಡಲಾಯಿತು. ಜಿಲ್ಲೆಯ ಇಪ್ಪತ್ತು ತಾಲೂಕುಗಳನ್ನು ವಿಭಜಿಸುವ, ಸೇರ್ಪಡೆ ಮಾಡುವ ಪ್ರಯೋಜನಾತ್ಮಕ ಪ್ರಯೋಗಗಳನ್ನು ಆಯಾ ಕಾಲದ ಕಲೆಕ್ಟರ್‌ಗಳು ಮಾಡುತ್ತಲಿದ್ದರು. ೧೮೫೯ ರಲ್ಲಿ ತಾಲೂಕುಗಳ ಸಂಖ್ಯೆ ಇಪ್ಪತ್ತರಿಂದ ಹದಿನೈದರ ಸಂಖ್ಯೆಗೆ ಇಳಿಕೆಯಾಯಿತು. ಆದರೆ ಭೌಗೋಳಿಕ ವ್ಯಾಪ್ತಿಯಲ್ಲಿ ವ್ಯತ್ಯಾಸಗಳಾಗಲಿಲ್ಲ. ಬಳ್ಳಾರಿ ಜಿಲ್ಲೆ ಮತ್ತು ಹೊಸಪೇಟೆಗೆ ಸಂಬಂಧಿಸಿದ ಆದ ಮಹತ್ವದ ಬೆಳವಣಿಗೆಯೆಂದರೆ, ಬಳ್ಳಾರಿ ಜಿಲ್ಲೆಯನ್ನು ಬಳ್ಳಾರಿ ಕೇಂದ್ರಿತ ಪೂರ್ವ ತಾಲೂಕುಗಳ ಉಪವಿಭಾಗವೆಂದೂ ಹೊಸಪೇಟೆ ಕೇಂದ್ರಿತ ಪಶ್ಚಿಮ ತಾಲೂಕುಗಳ ಉಪ ವಿಭಾಗವೆಂದೂ ವಿಭಜಿಸಲಾಯಿತು. ಇದು ೧೮೫೯ರಲ್ಲಿ ಮಾಡಿದ ಆಡಳಿತಾತ್ಮಕ ಸುಧಾರಣೆ. ಈ ಬೆಳವಣಿಗೆಯಿಂದ ಹೊಸಪೇಟೆಯು ಹೋಬಳಿ ಸ್ಥಾನದಿಂದ ತಾಲೂಕು ಕೇಂದ್ರವಾಗಿ, ಉಪವಿಭಾಗದ ಕೇಂದ್ರವೂ ಆಗಿ ಉನ್ನತಿ ಪಡೆಯಿತು. ೧೮೬೨ರಲ್ಲಿ ತಾಲೂಕು ಕಛೇರಿಯ, ೧೮೬೮ರಲ್ಲಿ ಉಪವಿಭಾಗದ ಕಛೇರಿಗಳನ್ನು ನಿರ್ಮಿಸಲಾಯಿತು. ನಗರ ಬೆಳೆಯುವ ಸೂಚನೆ ಕಂಡು ಬಂದಾಗ ೧೮೬೬–೬೭ರಲ್ಲಿ ನಗರದ ಹೊರವಲಯದಲ್ಲಿದ್ದ ಕೋಟೆಯ ಒಂದು ಭಾಗವನ್ನು ಕೆಡವಿ ನಗರವನ್ನು ವಿಸ್ತರಿಸಲಾಯಿತು. ಇಲ್ಲಿಂದ ಹೊಸಪೇಟೆಯು ತಾಲೂಕು ಕೇಂದ್ರವಾಗಿ, ಉಪವಿಭಾಗ ಕೇಂದ್ರವಾಗಿ ಬಳ್ಳಾರಿ ಜಿಲ್ಲಾ ಕೇಂದ್ರವಾದ ಬಳ್ಳಾರಿಗೆ ಸರಿಸಮವಾಗಿ ಬೆಳೆಯುತ್ತ ಬಂದಿತು. (ಇದೀಗ ಕರ್ನಾಟಕ ರಾಜ್ಯದ ೩೧ನೇ ಜಿಲ್ಲೆಯಾಗಿ, ‘ವಿಜಯನಗರ’ ಎಂಬ ಹೆಸರಿನಲ್ಲಿ ಕೊಟ್ಟೂರು, ಕೂಡ್ಲಿಗಿ, ಹರಪನಹಳ್ಳಿ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ಮತ್ತು ಹೊಸಪೇಟೆ ತಾಲೂಕುಗಳ ಜಿಲ್ಲೆಯಾಗಿ ಅಕ್ಟೋಬರ್ ೨, ೨೦೨೧ರಂದು ರೂಪುಗೊಂಡಿತು.)

* * *

ಇಪ್ಪತ್ತು ತಾಲೂಕುಗಳನ್ನೊಳಗೊಂಡ ಬಳ್ಳಾರಿ ಜಿಲ್ಲೆಯಷ್ಟೇ ಅಲ್ಲ; ಕನ್ನಡ ನಾಡೂ ಸೇರಿದಂತೆ ಬಹುಶಃ ದಕ್ಷಿಣ ಭಾರತದಲ್ಲಿಯೇ ಆರಂಭಿಕ ಹಂತದ ಸ್ವಾತಂತ್ರ್ಯ ಹೋರಾಟದ ಮೊದಲ ಹೆಜ್ಜೆ ಗುರುತುಗಳು ಮೂಡಿರುವುದು ಹೊಸಪೇಟೆ ಕೇಂದ್ರದ ಪರಿಸರದಲ್ಲಿ ಎಂಬುದು ಚಾರಿತ್ರಿಕ ಮಹತ್ವದ ಅಂಶವಾಗಿದೆ.

ಹಾಗೇ ಬಳ್ಳಾರಿಯ ಭಾಗದಲ್ಲಿ ಹೊರಗಡೆಯಿಂದ ಎದ್ದ ಸ್ವಾತಂತ್ರ್ಯದ ಜಾಗೃತಿ ಒಂದು ಸಿಂಹಾವಲೋಕನ ಪ್ರಕ್ರಿಯೆಗೆ ಕಾರಣವೂ ಆಯಿತು ಎಂಬುದು ಮುಖ್ಯವಾಗಿ ಗಮನಿಸಬೇಕಾದ ಅಂಶ.

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಜಿಲ್ಲೆಯ ಪಶ್ಚಿಮಭಾಗವಷ್ಟೇ ಅಲ್ಲದೇ, ಮದ್ರಾಸ್ ಪ್ರಾವೆನ್ಸಿಯ ವಿಶಾಲ ಭೂವ್ಯಾಪ್ತಿಯ ಪಶ್ಚಿಮ ತುದಿಯಾಗಿತ್ತು. ಸಹಜವಾಗಿ ಆಡಳಿತಾತ್ಮಕವಾದ ತೊಂದರೆಯನ್ನೂ ಅನುಭವಿಸುತ್ತಿತ್ತು. ಇದು ಅಷ್ಟಕ್ಕೆ ನಿಂತಿದ್ದರೆ, ಪರಿಣಾಮಾತ್ಮಕ ಪ್ರತಿಕ್ರಿಯೆಗೆ ಕಾರಣವಾಗುತ್ತಿರಲಿಲ್ಲ. ಅವಜ್ಞೆ, ತಾರತಮ್ಯ, ಸ್ವಾರ್ಥಪರ ಮತ್ತು ಸ್ವಾಭಿಮಾನಕ್ಕೆ ಧಕ್ಕೆ ತರುವ ದೈನಂದಿನ ಜೀವನವಿಧಾನವು ಸಾಮಾಜಿಕವಾಗಿ ವಿಲೋಮ ಸ್ಥಿತಿಯನ್ನುಂಟು ಮಾಡಿತ್ತು. ಇದು ಬಳ್ಳಾರಿ ಜಿಲ್ಲೆಯನ್ನು ವ್ಯಾಪಿಸಿದ್ದಂತೆಯೇ ಸ್ವಾತಂತ್ರ್ಯ, ದೇಶಾಭಿಮಾನ, ನಾಡು–ನುಡಿಗಳ ಬಗ್ಗೆ ಅರಿವು ಉಂಟಾಯಿತು. ಈ ಎಲ್ಲಾ ಚಟುವಟಿಕೆಗಳ ಅಧ್ವರ್ಯು; ಮುಂಡರಗಿ ಭೀಮರಾಯ.

ಮುಂಡರಗಿ ಭೀಮರಾಯನ ತಂದೆ ಪೇಶ್ವೆಯವರ ಆಳ್ವಿಕೆಯ ಕಾಲದಲ್ಲಿ ನ್ಯಾಯಾಧೀಶರಾಗಿ ಮುಂಬಯಿ ಪ್ರಾಂತದಲ್ಲಿದ್ದವರು. ಭೀಮರಾಯನ ಜನನ, ವಿದ್ಯಾಭ್ಯಾಸವೆಲ್ಲಾ ಮುಂಬಯಿ ಪ್ರಾಂತದಲ್ಲಿಯೇ ಆಗಿದ್ದು, ಸಾಮಾಜಿಕ ಸೇವಾವೃತ್ತಿ ಶಿಕ್ಷಣವನ್ನು ಪಡೆದಿದ್ದರಿಂದ ಸಾರ್ವಜನಿಕ ಆಡಳಿತದಲ್ಲಿ ಹುದ್ದೆ ಪಡೆದು ಕಾರ್ಯನಿರ್ವಹಿಸುತ್ತಿದ್ದ. ಮಾತೃಭಾಷೆ ಕನ್ನಡವಾಗಿತ್ತಾದರೂ ಮರಾಠಿ, ಇಂಗ್ಲಿಷ್ ಬಲ್ಲವನಾಗಿದ್ದ. ಸ್ವಾಭಿಮಾನ, ಸ್ವತಂತ್ರ ಮನೋಭಾವ, ಕಾರ್ಯತತ್ಪರತೆ, ಪ್ರಾಮಾಣಿಕತೆ, ಜೀವನಶ್ರದ್ಧೆ, ಪರಿಮಿತಿಯ ಅರ್ಥಪೂರ್ಣ ಬದುಕುಗಳಿಗೆ ಹೆಸರಾಗಿದ್ದ ಭೀಮರಾಯನು ಸಾಮಾಜಿಕ ಸೇವಾ ವೃತ್ತಿಯಲ್ಲಿಯೂ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು. ಆದರೆ, ಪೇಶ್ವೆಯವರ ಸಮಯ ಸಾಧಕ ನಿರ್ಣಯಗಳು, ಬ್ರಿಟೀಶ್ ಆಡಳಿತ ನೀತಿಯ ವಿರುದ್ಧ ನಿರ್ಭೀತನಾಗಿದ್ದ. ಆ ಕಾರಣಕ್ಕಾಗಿ ಭೀಮರಾಯನನ್ನು ಮದ್ರಾಸ್ ಪ್ರಾವೆನ್ಸಿಯ ಬಳ್ಳಾರಿ ಜಿಲ್ಲೆಗೆ ವರ್ಗಾಯಿಸಿದರು. ಹರಪನಹಳ್ಳಿ, ಕಂಪ್ಲಿ, ಹೊಸಪೇಟೆ ಭಾಗಗಳಲ್ಲಿ ಭೀಮರಾಯನು ತಹಶೀಲದಾರರಾಗಿ ಕಾರ್ಯನಿರ್ವಹಿಸುತ್ತಿದ್ದ. ಈ ಭಾಗದಲ್ಲಿಯೂ ತನ್ನ ಚಟುವಟಿಕೆಗಳನ್ನು ಭೀಮರಾಯನು ಮುಂದುವರೆಸಿದ



ಕಾರಣವಾಗಿ ೧೮೫೮ರಲ್ಲಿ ರಾಜದ್ರೋಹವನ್ನು ಹೊರಿಸಿ ಇಲ್ಲಸಲ್ಲದ ಆರೋಪಗಳನ್ನು ಆಧರಿಸಿ ಅಧಿಕಾರದಿಂದ ಕಿತ್ತೊಗೆದರು. ಧೃತಿಗೆಡದ ಭೀಮರಾಯನು ಹರಪನಹಳ್ಳಿ, ಹೊಸಪೇಟೆ, ಕಂಪ್ಲಿ, ಕಮಲಾಪುರ ಭಾಗಗಳಲ್ಲಿ ಬಂಡಾಯದ ಮೂಲಕ ವ್ಯವಸ್ಥೆಯ ವಿರುದ್ಧ ತನ್ನ ಅಸಮಾಧಾನವನ್ನು ಸಾಂಘಿಕವಾಗಿ ವ್ಯಕ್ತಪಡಿಸಿದನು.

ಇಂಥ ಕ್ಲುಪ್ತ ಸಂದರ್ಭದಲ್ಲಿ ಕಾಕತಾಳೀಯವಾಗಿ ಮುಂಡರಗಿ ಭೀಮರಾಯನಿಗೆ ಸಿಕ್ಕ ಸದವಕಾಶವೆಂದರೆ ೧೮೫೭ರಲ್ಲಿ ನಡೆದ ಸಿಪಾಯಿ ದಂಗೆ ಪ್ರಕರಣ. ಭಾರತ ದೇಶ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಸಿಪಾಯಿ ದಂಗೆ ಎಂದು ಸಾಪೇಕ್ಷಿತವಾಗಿ ಚರಿತ್ರೆಯಲ್ಲಿ ಗುರುತಿಸಲಾಗಿರುವ ಈ ಘಟನೆಯನ್ನು ಭಾರತೀಯ ಸ್ವಾತಂತ್ರ್ಯ ಮತ್ತು ಸ್ವದೇಶಿ ಅಸ್ಮಿತೆ–ಅಸ್ತಿತ್ವಗಳ ಪರಂಪರೆಯ ಹೋರಾಟದ ಚರಿತ್ರೆಯಲ್ಲಿ ಈ ಘಟನೆಯು ಭಾರತದ ಕೊನೆಯ ಸ್ವಾತಂತ್ರ್ಯ ಹೋರಾಟದ ಘಟನೆ ಎಂದೂ ಕರೆಯಲಾಗಿದೆ. ಹೀಗೆ ಇಂಥ ಸ್ವಾತಂತ್ರ್ಯ ಹೋರಾಟದ ಪ್ರಥಮ ಸಂಗ್ರಾಮ ಎಂದು ಗುರುತಿಸಲಾದ ಘಟನೆಯಲ್ಲಿ ಭೀಮರಾಯನು ಭಾಗವಹಿಸಿದ್ದನು. ಭೀಮರಾಯನು ಆ ಸಂದರ್ಭದಲ್ಲಿ ಹೊಸಪೇಟೆಯ ಪರಿಸರದಲ್ಲಿ ಅಸಂಘಟಿತ ನೆಲೆಯಲ್ಲಿ ಕ್ರಿಯಾಶೀಲನಾಗಿದ್ದ. ೧೮೫೭–೫೮ರ ಈ ಜಾಗೃತಾವಧಿಯಲ್ಲಿ ಕ್ರಿಯಾಶೀಲನಾಗಿ ಭಾಗವಹಿಸಿದ್ದು ಮುಂಬಯಿ ಪ್ರಾಂತದ ಧಾರವಾಡ ಜಿಲ್ಲೆಗೂ, ಮದ್ರಾಸ್ ಪ್ರಾವೆನ್ಸಿಯ ಬಳ್ಳಾರಿ ಜಿಲ್ಲೆಗೂ, ಅದರಲ್ಲಿಯೂ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಎಂಬುದು ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಗಮನಿಸಬೇಕಾದ ಅಂಶವಾಗಿದೆ.

೧೮೫೭ರಲ್ಲಿ ಉತ್ತರ ಭಾರತದಲ್ಲಿ ನಡೆದ ದೇಶದ ಮೊದಲ ಸ್ವಾತಂತ್ರ್ಯ ಸಂಗ್ರಾಮಕ್ಕೂ, ೧೮೫೮ರಲ್ಲಿ ನಡೆದ ಭೀಮರಾಯನ ಹೊಸಪೇಟೆ ಭಾಗದ ಬಂಡಾಯಕ್ಕೂ ಮತ್ತು ಕನ್ನಡ ನಾಡಿನಲ್ಲಿಯೇ ೧೮೫೮ರಲ್ಲಿಯೇ ನಡೆದ ನರಗುಂದ ಬಂಡಾಯಕ್ಕೂ ನೇರ ಸಂಬಂಧವಿದೆ ಎಂದು ಇತಿಹಾಸ ತಜ್ಞರು ಗುರುತಿಸುತ್ತಾರೆ. ಭೀಮರಾಯನದು ಸ್ವಾತಂತ್ರ್ಯ ಹೋರಾಟದ ಉದ್ದೇಶ, ಗುರಿ ಇದ್ದಿರಲಾರದಾದರೂ ಬ್ರಿಟೀಶರ ಆಡಳಿತ ನೀತಿ ಮತ್ತು ವ್ಯವಸ್ಥೆಯಲ್ಲಿ ಅವೈಜ್ಞಾನಿಕತೆ, ಪ್ರಶ್ನಾತೀತ ಸ್ವಾರ್ಥ ಚಿಂತನೆಗಳ ವಿರುದ್ಧದ ನಿಲುವು ಕ್ರಮೇಣ

ವಿಸ್ತಾರಗೊಂಡು ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಯ ಮೂಲವಾಯಿತು ಎಂಬುದನ್ನು ಮರೆಯಲಾಗದು. ಭೀಮರಾಯನ ಬಂಡಾಯ ಚಟುವಟಿಕೆಯಂಥ ಸೀಮಿತ ವಲಯದ ಹೋರಾಟವು ಸ್ವಾತಂತ್ರ್ಯ ಹೋರಾಟದಂಥ ವಿಸ್ತಾರವನ್ನು ಪಡೆಯಿತು.

ಸ್ವಾತಂತ್ರ್ಯ ಹೋರಾಟವು ರಾಷ್ಟ್ರಮಟ್ಟದ ವಿದ್ಯಮಾನವಾಗಲು ಪ್ರಾಂತ ಮಟ್ಟದಲ್ಲಿ ಹೇಗೆ ಸಂಘಟಿತವಾಗಿತ್ತೋ ಅದೇ ರೀತಿಯಲ್ಲಿಯೇ ಹೊಸಪೇಟೆಯ ಮೂಲಕ ಬಳ್ಳಾರಿ, ರಾಯಚೂರು, ಧಾರವಾಡ ಜಿಲ್ಲೆಗಳಲ್ಲಿ ಒಂದು ಜೀವನಧರ್ಮವಾಗಿ ವಿಕಾಸ ಹೊಂದಿತು. ಮದ್ರಾಸ್ ಪ್ರಾವೆನ್ಸ್, ಮುಂಬಯಿ ಪ್ರಾಂತ ಮತ್ತು ಹೈದರಾಬಾದಿನ ನಿಜಾಮ ಪ್ರಾಂತಗಳು ಕೂಡುವ ಪ್ರದೇಶದ ಭೌಗೋಳಿಕ ಕೇಂದ್ರವಾಗಿದ್ದೆ ಹೊಸಪೇಟೆಯಲ್ಲಿ. ಭೀಮರಾಯನ ಬಂಡಾಯವು ಒಂದು ನೂತನ ಸ್ವಾತಂತ್ರ್ಯ ಹೋರಾಟದ ವಲಯವನ್ನೇ ಅದು ಸೃಷ್ಟಿಸಿತ್ತು. ಇದು ಎಂಥ ಅವಿನಾಭಾವವನ್ನುಂಟು ಮಾಡಿತ್ತೆಂದರೆ, ಸ್ವಾತಂತ್ರ್ಯ ಹೋರಾಟಕ್ಕೆ ಮೂಲವಾಗಿದ್ದ ಬಳ್ಳಾರಿ ಪರಿಸರವು ದೇಶಮಟ್ಟದಲ್ಲಿ ಸಂಘಟಿತವಾಗಿದ್ದ ಸ್ವಾತಂತ್ರ್ಯ ಹೋರಾಟವನ್ನು ಅನುಸರಿಸಿಕೊಂಡೆ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ ಸಂಘಟಿತವಾಗಿತ್ತು. ಆದ್ದರಿಂದ ಹೊಸಪೇಟೆ ಮೂಲದಿಂದ ಜಿಲ್ಲೆ ಮತ್ತು ಜಿಲ್ಲಾ ಪರಿಸರದಲ್ಲಿ ವ್ಯಾಪಿಸಿದ ಈ ಸ್ವತಂತ್ರ ಮನೋಧರ್ಮವು ಕ್ರಮೇಣ ದೇಶದ ಎಲ್ಲಾ ಪ್ರಮುಖ ವಿದ್ಯಮಾನಗಳಿಗೆ ಅರ್ಥಪೂರ್ಣವಾಗಿ ಪ್ರತಿಸ್ಪಂದಿಸಿತ್ತು. ರಾಷ್ಟ್ರದ, ರಾಜ್ಯದ, ಪ್ರಾಂತದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸಪೇಟೆ ಕೇಂದ್ರ ಚಟುವಟಿಕೆಗಳು ಸಂಪನ್ಮೂಲವಾಗಿವೆ.

ಮುಂಡರಗಿ ಭೀಮರಾಯನ ವ್ಯಕ್ತಿತ್ವದಲ್ಲಿನ ಹೆಚ್ಚುಗಾರಿಕೆಯೆಂದರೆ, ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ಒಂದೆಡೆಯಿರಲಿ, ಸ್ವಾತಂತ್ರ್ಯದ ಪರಿಕಲ್ಪನೆಯಾಗಲೀ, ಪರಿಭಾವನೆಯಾಗಲೀ ಮೂಡುವುದಕ್ಕಿಂತಲೂ ಪೂರ್ವದಲ್ಲಿಯೇ ಅಂಥ ಒಂದು ಕ್ರಿಯಾಶೀಲ ಚಟುವಟಿಕೆಯಲ್ಲಿ ಸಂಘಟನಾತ್ಮಕವಾಗಿ ತೊಡಗಿಸಿದ್ದುದು ಗಮನಾರ್ಹವಾಗಿದೆ. ಮುಂಡರಗಿ ಭೀಮರಾಯನನ್ನು ಹುದ್ದೆಯಿಂದ ವಜಾ ಮಾಡಿದ ದಿನದಿಂದಲೇ ಬ್ರಿಟೀಶರ ಆಡಳಿತ ನೀತಿಯ ಬಗ್ಗೆ ಸಂಘಟನಾತ್ಮಕವಾಗಿ ವಿರೋಧಿಸಲು ಕಾರ್ಯೋನ್ಮುಖನಾದ. ಭೀಮರಾಯನ



ಜೊತೆಗೆ ಕ್ರಮೇಣ ಹಮ್ಮಿಗೆ ಕೆಂಚನಗೌಡ, ಸೊರಟೂರಿನ ದೇಸಾಯಿಗಳು, ಗೋವಿನಕೊಪ್ಪದ ದೇಸಾಯಿಗಳು, ಡಂಬಳದ ದೇಶಮುಖರು ಸೇರಿಕೊಂಡರು. ಈ ದೇಸಾಯಿ–ದೇಶಮುಖರು ಸ್ವತಂತ್ರ ಮನೋಧರ್ಮದವರೂ, ಸಮಾಜಪರ ಚಿಂತಕರೂ ಆಗಿದ್ದರಿಂದ ಒಂದೇ ಸೂತ್ರವನನ್ನು ಸರಿಸಿ ಭೀಮರಾಯನ ಜೊತೆಗೂಡಿದರು. ಪರಸ್ಪರ ಹೊಂದಾಣಿಕೆಯಲ್ಲಿ ಇವರೆಲ್ಲರೂ ಆಪ್ತರಾದರು. ವಜಾಗೊಂಡಿದ್ದ ಭೀಮರಾಯ ಹುದ್ದೆಯ ಮುಲಾಜೂ ಮತ್ತು ಆಡಳಿತದ ಮುಲಾಜು ಇಲ್ಲದೇ ಯಾರ ನಿಯಂತ್ರಣದಲ್ಲಿಯೂ ಇರಲಿಲ್ಲ. ಆದರೆ ಭೀಮರಾಯನ ಈ ಆಪ್ತಕೂಟವು ಯೋಜಿಸುತ್ತಿದ್ದ ಒಳಸಂಚನ್ನು ಅರ್ಥಮಾಡಿಕೊಂಡಿದ್ದ ಧಾರವಾಡ ಜಿಲ್ಲಾ ಕಲೆಕ್ಟರ್ ಆಡಳಿತವು ಆಗಸ್ಟ್ ೧೮೫೭ರಲ್ಲಿ ಭೀಮರಾಯನನ್ನು ಕರೆಸಿ ಎಚ್ಚರಿಕೆ ಕೊಟ್ಟರು. ಬಂಧನದ ಭೀತಿಯನ್ನುಂಟು ಮಾಡಿದರು. ಭೀಮರಾಯ ಎದೆಗುಂದಲಿಲ್ಲ. ಭೀಮರಾಯನ ಈ ಎಲ್ಲಾ ಚಟುವಟಿಕೆಗಳ ಕೇಂದ್ರ ಹೊಸಪೇಟೆ ಮತ್ತು ಕಮಲಾಪುರ. ಮದ್ರಾಸ್ ಪ್ರಾವೆನ್ಸ್‌ಗೆ ಸಂಬಂಧಿಸಿದ್ದ ಬಳ್ಳಾರಿ ಜಿಲ್ಲೆಯು ಮುಂಡರಗಿ ಭೀಮರಾಯನಿಗೆ ಆಡಳಿತಾತ್ಮಕ ಹಿನ್ನೆಲೆಯಲ್ಲಿ ಸುರಕ್ಷಿತವಾಗಿತ್ತು. ಹೊಸಪೇಟೆಯು ರಾಯಚೂರು ಜಿಲ್ಲೆಯ ಗಡಿಯಾಗಿದ್ದರಿಂದ ನಿಜಾಮ ಪ್ರಾಂತಕ್ಕೂ ಮುಂಬಯಿ ಪ್ರಾಂತಕ್ಕೂ ಸಂವಹನ ಮಾಡಬಹುದಾದ ಕಾರಣದಿಂದ ಅನುಕೂಲ ಸ್ಥಳವೂ ಆಗಿತ್ತು. ಹಮ್ಮಿಗೆಯ ಕೆಂಚನಗೌಡನ ನೇತೃತ್ವದಲ್ಲಿ ಮದ್ದುಗುಂಡುಗಳನ್ನು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಕೆಲವು ಮನೆಗಳನ್ನು ನಿಗದಿಪಡಿಸಲಾಯಿತು. ಮದ್ದುಗುಂಡುಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸುತ್ತಿದ್ದುದು ಆಡಳಿತಗಾರರಿಗೆ ಇರುಸು ಮುರುಸು ತಂದಿತು. ಕೆಂಚನಗೌಡನನ್ನು ನಿಯಂತ್ರಿಸಲು ಹಮ್ಮಿಗೆಯನ್ನು ಮತ್ತು ಹೊಸಪೇಟೆಯಲ್ಲಿದ್ದ ಗುಪ್ತ ತಾಣಗಳನ್ನು ಶೋಧಿಸಿ ವಶಪಡಿಸಿಕೊಳ್ಳಲಾಯಿತು. ಈ ಸುದ್ದಿ ಭೀಮರಾಯನಿಗೆ ತಿಳಿದು ಕೆಂಚನಗೌಡರೊಂದಿಗೆ ಡಂಬಳದ ಮೇಲೆ ದಾಳಿ ಮಾಡಿದನು. ಕೊಪ್ಪಳವನ್ನು ಸಹ ತನ್ನ ವಶಕ್ಕೆ ತೆಗೆದುಕೊಂಡು ಹೊಸಪೇಟೆ, ಕಮಲಾಪುರ, ಕೊಪ್ಪಳ, ಡಂಬಳ–ಗದಗ ಭಾಗದಲ್ಲಿ ಸ್ವತಂತ್ರ ಚಿಂತನೆಯ ಸ್ವಾಭಿಮಾನಿ ಉತ್ಸಾಹದ ಯುವಕರಿಂದ ಸಂಘಟನೆಗೆ ಬಲಬಂದಿತು. ಆದರೆ, ಈ ಸಂಘಟನೆಯು ಒಂದು ಅರ್ಥದಲ್ಲಿ ಅಸಂಘಟಿತವಾಗಿತ್ತು. ದೇಶ,

ಸ್ವಾತಂತ್ರ್ಯ, ಸ್ವದೇಶಿ ಚಿಂತನೆಗಳಂಥ ತಿಳುವಳಿಕೆಯು ಒಂದು ಖಚಿತ ಮಟ್ಟದ್ದಿರಲಿಲ್ಲ. ಭೀಮರಾಯನು ಹಮ್ಮಿಗೆ ಮತ್ತು ಕೊಪ್ಪಳಗಳನ್ನು ಬ್ರಿಟೀಶ ಮತ್ತು ನಿಜಾಮನ ಆಳ್ವಿಕೆಯ ವಸಾಹತುಗಳನ್ನು ತನ್ನ ವಶಕ್ಕೆ ತಂದುಕೊಳ್ಳಲು ಬಳ್ಳಾರಿ ಜಿಲ್ಲೆಯಲ್ಲಿ ಸಂಚರಿಸಿ ಹೊಸಪೇಟೆ–ಕಮಲಾಪುರಗಳಿಂದ ತನ್ನ 'ಸೈನ್ಯ' ಜನರನ್ನು ಸಂಗ್ರಹಿಸಿದನು. ಆ ಕಾಲದಲ್ಲಿ (೧೮೫೭–೫೮) ಬಳ್ಳಾರಿ ಜಿಲ್ಲೆಯಿಂದ (ಹೊಸಪೇಟೆ ಭಾಗದಿಂದ) ಸುಮಾರು ಒಂದು ನೂರಾ ಐವತ್ತು ಜನ ಕ್ರಾಂತಿಕಾರರೂ (ಹೋರಾಟಗಾರರೂ ಚಳುವಳಿಗಾರರೂ ದೇಶಭಕ್ತರೂ) 'ಸೈನ್ಯ'ದಲ್ಲಿ ಸೇರಿಕೊಂಡರು ಎಂಬ ಮಾಹಿತಿಗಳಿವೆ.

ಕೊಪ್ಪಳ ಮತ್ತು ಗದಗ–ಡಂಬಳಗಳ ಆಡಳಿತ ವ್ಯವಸ್ಥೆಯು ಭೀಮರಾಯನ ನೇತೃತ್ವದ ಸೈನ್ಯದ ವಶವಾಗಿದ್ದು ನಿಜಾಮನಿಗಿಂತಲೂ ಬ್ರಿಟೀಷರು ತಮ್ಮ ವೈಫಲ್ಯವೆಂದು ಭಾವಿಸಿದರು. ಇದನ್ನು ಪ್ರತಿಷ್ಠೆಯ ವಿಷಯವೆಂದು ಭಾವಿಸಿ ಧಾರವಾಡ ಮತ್ತು ಹೈದರಾಬಾದ್‌ಗಳಿಂದ ಪ್ರಾವೆನ್ಸ್ ಆಡಳಿತವು (ಮುಂಬಯಿ ಪ್ರಾಂತ ಮತ್ತು ನಿಜಾಮನ ಆಳ್ವಿಕೆ) ಪ್ರತಿದಾಳಿ ಮಾಡಿತು. ಬಳ್ಳಾರಿಯಿಂದ ಮೇಜರ್ ಹ್ಯೂಜ್‌ನ ನಾಯಕತ್ವದಲ್ಲಿಯೂ ದೊಡ್ಡ ಸೈನ್ಯ (೨೫ ಮೇ ೧೮೫೮)ವು ಜಂಟಿ ಸೈನ್ಯದಲ್ಲಿ ಸೇರಿಕೊಂಡಿತು. ಆದರೂ ಮುಂಡರಗಿ ಭೀಮರಾಯನ ರಣತಂತ್ರ ಮತ್ತು ತನ್ನ 'ಸೈನ್ಯ'ದಲ್ಲಿದ್ದ ಯುವಕರ ಉತ್ಸಾಹದಿಂದ ಬ್ರಿಟೀಶರು ವಿಫಲರಾದರು. ಹೈದರಾಬಾದ್‌ನಿಂದ ಮತ್ತೊಂದು ಸೇನಾ ತುಕಡಿಯೊಂದನ್ನು (೧ನೇ ಆಗಸ್ಟ್ ೧೮೫೮) ಕರೆತರಲಾಯಿತು. ಮೇಜರ್ ಹ್ಯೂಜ್‌ನು ಭೀಮರಾಯನಿಗೆ ಪತ್ರ ಬರೆದು ಶರಣಾಗತನಾಗಲು ಕೇಳಿದನು. ಇದಕ್ಕೆ ಭೀಮರಾಯನು ಪ್ರತಿಕ್ರಿಯಿಸಲಿಲ್ಲ. ಅದೇ ದಿನ ಘೋರ ಕದನ ನಡೆಯಿತು.

ಶಸ್ತ್ರಾಸ್ತ್ರ ಸುಸಜ್ಜಿತರಾಗಿದ್ದ ಮತ್ತು ಅಧಿಕ ಸಂಖ್ಯೆಯಲ್ಲಿದ್ದ ಬ್ರಿಟೀಶರ ಕೈ ಮೇಲಾಯಿತು. ದುರಾದೃಷ್ಟವಶಾತ್ ಭೀಮರಾಯನ ಸಹಚರ, ಗುಮಾಸ್ತನ ಪಿತೂರಿಯಿಂದ ಬ್ರಿಟೀಶರು ಭೀಮರಾಯನ ಗುಪ್ತಠಾಣಗಳನ್ನು ಅರಿತು ನೇರ ದಾಳಿ ಮಾಡಿದರು. ಭೀಮರಾಯನು ಮತ್ತು ಕೆಂಚನಗೌಡನು ವೀರಾವೇಶದಿಂದ ಹೋರಾಡಿದರು. ಆದರೆ ಸೈನ್ಯದ ಶಕ್ತಿ ಕುಂದಿದ ಕಾರಣವಾಗಿ ಭೀಮರಾಯ ಮತ್ತು ಕೆಂಚನಗೌಡ ಹೋರಾಟ ಮಾಡಿದ ಸ್ಥಳದಲ್ಲಿಯೇ ಪ್ರಾಣ ಬಿಟ್ಟರು. ಗಮನಿಸಬೇಕಾದ ಅಂಶವೆಂದರೆ, ಭಾರತ ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ಎಂಬ ದೊಡ್ಡ ಪ್ರಮಾಣದ ವಿದ್ಯಮಾನವಾಗಲೀ ಅಂಥ ಘಟನೆಗಳನ್ನು ಕ್ರೋಢೀಕರಿಸಿ ಸಂಘಟನಾತ್ಮಕ ಯಾವುದೇ ಸಂಘಟನೆ–ಸಂಸ್ಥೆಗಳಾಗಲೀ ಈ ದೇಶದಲ್ಲಿ ಹುಟ್ಟಿಕೊಂಡಿರಲಿಲ್ಲ. ಅಂಥ ಕ್ಲುಪ್ತ ಮತ್ತು ಶೂನ್ಯಕಾಲ ಘಟ್ಟದಲ್ಲಿ ಭೀಮರಾಯನ ಹೋರಾಟ ಮತ್ತು ಬಲಿದಾನಗಳು ಚರಿತ್ರಾರ್ಹ ಹಾಗೂ ಸ್ಮರಣಾರ್ಹವೆನಿಸುತ್ತವೆ.

ಭೀಮರಾಯ, ಕೆಂಚನಗೌಡರ ಬಲಿದಾನದ ನಂತರ ಅನುಯಾಯಿಗಳಿಗೆ ಯಜಮಾನಿಕೆಯ ಕೊರಗು ಕಾಡಿತೇ ವಿನಾ ಉತ್ಸಾಹದಿಂದ ವಿಮುಖರಾಗಲಿಲ್ಲ. ಬ್ರಿಟೀಶ ಆಡಳಿತದಿಂದ ಒಂದು ನೂರಾ ಐವತ್ತು ಕ್ರಾಂತಿಕಾರರು ಸೆರೆಹಿಡಿಯಲ್ಪಟ್ಟರು. ಅವರಲ್ಲಿ ಎಪ್ಪತ್ತೈದು ಕ್ರಾಂತಿಕಾರರನ್ನು ಗಲ್ಲಿಗೇರಿಸಲಾಯಿತು. ಉಳಿದವರ ಆಸ್ತಿ–ಪಾಸ್ತಿಗಳನ್ನು ವಶಪಡಿಸಿಕೊಳ್ಳಲಾಯಿತು.

ರಾಯಚೂರು ಜಿಲ್ಲಾಧಿಕಾರಿ ಟೈಲರ್ ಇದರಲ್ಲಿ ನೇರವಾಗಿ ಪಾಲ್ಗೊಂಡು ಧಾರವಾಡದ ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರಿಗೆ ತಮ್ಮ ಪತ್ರದಲ್ಲಿ ರಾಯಚೂರಿನ ಜೈಲಿನಲ್ಲಿದ್ದ ಎಪ್ಪತ್ತೇಳು ಕ್ರಾಂತಿಕಾರರನ್ನು ಗುಂಡಿಕ್ಕಿ ಕೊಲ್ಲಲಾಯಿತು, ಅರವತ್ತು ಜನ ಕ್ರಾಂತಿಕಾರರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು. ಗುಂಡಿಗೆ ಆಹುತಿಯಾದವರಲ್ಲಿ ಬಳ್ಳಾರಿ ಜಿಲ್ಲೆಯ ಅಂದರೆ ಹೊಸಪೇಟೆಯ ಹದಿಮೂರು ಜನ ಕ್ರಾಂತಿಕಾರರೂ ಸೇರಿದ್ದರು. ಹೊಸಪೇಟೆ, ಕಂಪ್ಲಿ, ಬಾಗುವಾಡಿ, ಹರಪನಹಳ್ಳಿ, ಕಮಲಾಪುರ–ದವರುಗಳಾಗಿದ್ದ ಈ ಚಳುವಳಿಗಾರರು ಬಲಿದಾನ ಮಾಡಿದ್ದು ಊರವರು ಅಭಿಮಾನ–ಹೆಮ್ಮೆ ತಾಳಿದ್ದೂ ಅಲ್ಲದೇ ವ್ಯವಸ್ಥೆಯ ವಿರುದ್ಧದ ತಮ್ಮ ಧ್ಯೇಯ ಮನೋಧರ್ಮವನ್ನು ಹಾಗೆಯೇ ಉಳಿಸಿಕೊಂಡಿದ್ದರು. ಮತ್ತೊಂದು ವಿಷಯವೆಂದರೆ, ಮುಂಡರಗಿ ಭೀಮರಾಯನಿಗೆ ಸಂಬಂಧಿಸಿದ ವಿವರಗಳನ್ನು ಪಡೆದರು. ಗುಮಾಸ್ತನ ಹೇಳಿಕೆಯು (೪ನೇ ಜೂನ್ ೧೮೫೮) ಪ್ರಕಟವೂ ಆಯಿತು. ಆ ಪತ್ರದ ಪ್ರಕಾರ ಭೀಮರಾಯನ ಬೆಂಬಲಿತ ಸ್ವಯಂ ಪ್ರೇರಿತ ಯುವಕರ 'ಸೈನ್ಯ'ದ ಭರತಿಗೆ ಭೀಮರಾಯನ ಅವಿಶ್ರಾಂತ ಪ್ರಯತ್ನದ ವಿವರಗಳಿವೆ. ಕೊನೆಯ ಪ್ಯಾರಾದಲ್ಲಿ, ಹೊಸಪೇಟೆ, ಕಮಲಾಪುರ ಮತ್ತು

ಇತರ ಗ್ರಾಮಗಳವರೂ ಬ್ರಿಟೀಶರ ವಿರುದ್ಧದ ಬಂಡಾಯದಲ್ಲಿ ಠಾಕೂರ ಎನ್ನುವ ವ್ಯಕ್ತಿಗೇ (ಠಾಕೂರ ಮನೆತನಗಳು ಹೊಸಪೇಟೆಯಲ್ಲಿ ಇಂದು ಯಾರೂ ಸಿಗಲಾರರು. ಬಹುಶಃ ಆ ಕಾಲದಲ್ಲಿ ಈ ಭಾಗಕ್ಕೆ ವಲಸೆ ಬಂದಿರಬಹುದು) ಹೇಳಿ ಕಳುಹಿಸಿ– ಖರ್ಚಿಗಾಗಿ ೫೦೦/–ರೂ.ಗಳನ್ನು ಕೊಟ್ಟ ವಿಷಯ ಉಲ್ಲೇಖವಿದೆ. ಮುಂಡರಗಿ ಭೀಮರಾಯನೊಂದಿಗೆ ಆತನ "ಸೈನ್ಯ"ದಲ್ಲಿ ತುಂಬಾ ಚಟುವಟಿಕೆಗಳಿಂದ ಕ್ರಿಯಾಶೀಲನಾಗಿದ್ದವರು ಹಡಗಲಿ ತಾಲೂಕಿನ ಮೀರಾಕೋರ್ನಹಳ್ಳಿಯ ರಾಯನಗೌಡ, ಭರಮಗೌಡ ಮೊದಲಾದವರು ಪ್ರಮುಖ ರಾಗಿದ್ದರು.

* * *

೧೮೫೮ರಲ್ಲಿ ಮುಂಡರಗಿ ಭೀಮರಾಯನು ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಮಲಾಪುರ ಪರಿಸರದಲ್ಲಿ ದೇಶಾಭಿಮಾನ, ದೇಶಭಕ್ತಿಯ ಬೀಜಗಳನ್ನು ಹಾಕಿದ ನಂತರ ಉತ್ಸಾಹ, ಅಭಿಮಾನಗಳ ಮನಸ್ಥಿತಿಯನ್ನು ಜಿಲ್ಲೆ ಕಾಯ್ದಿರಿಸಿಕೊಂಡಿತ್ತು. ಹೊಸಪೇಟೆ ಕೇಂದ್ರದಲ್ಲಿ ಒಂದು ಶಕೆಯೇ ಆರಂಭಗೊಂಡಿತು. ಮುಂಡರಗಿ ಭೀಮರಾಯನ ನಂತರದ ಗಮನ ಸೆಳೆಯುವ ಅಂಶವೆಂದರೆ, ೧೮೮೫ರಲ್ಲಿ ಅಖಂಡ ಭಾರತ ದೇಶದಲ್ಲಿ ಕಾಂಗ್ರೆಸ್ ಎಂಬ ಸಂಘಟನಾತ್ಮಕ ಸಂಸ್ಥೆ ಸ್ಥಾಪನೆಯಾದ ಸಂದರ್ಭ. ದೇಶದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಹೊಸಪೇಟೆ ಹೇಗೆ ಆರಂಭಿಕ ಹಂತದ ಸ್ಥಳವಾಗಿ ಗಮನ ಸೆಳೆಯಿತೋ ಹಾಗೆಯೇ ಬಳ್ಳಾರಿ ಜಿಲ್ಲೆಯು ಅದರಲ್ಲಿ ವಿಶೇಷವಾಗಿ ಬಳ್ಳಾರಿ ನಗರವು ಕಾಂಗ್ರೆಸ್ ಸ್ಥಾಪನೆಯ ಸಂದರ್ಭದಲ್ಲಿ ದಕ್ಷಿಣ ಭಾರತ ಮತ್ತು ವಿಶೇಷವಾಗಿ ಕನ್ನಡ ನಾಡಿನಲ್ಲಿಯೇ ಗಮನ ಸೆಳೆಯಿತು.

೧೮೫೭ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಸೈನಿಕರು ಹೂಡಿದ ಬಂಡಾಯವನ್ನು ಬ್ರಿಟೀಶ್ ದೃಷ್ಟಿ 'ಸಿಪಾಯಿ ದಂಗೆ' ಎಂದೇ ಕರೆಯಿತಾದರೂ ಭಾರತೀಯ ಸ್ವಧರ್ಮ ದೃಷ್ಟಿಯು ಅದನ್ನು ದೇಶದ ಪ್ರಪ್ರಥಮ ಸ್ವತಂತ್ರ ಸಂಗ್ರಾಮ ಎಂದು ಕರೆಯಿತು. ಆದರೆ ಈ ಘಟನೆ ಭಾರತ ದೇಶದಲ್ಲಿ ಒಂದು ರೀತಿಯ ಮತ್ತು ಬ್ರಿಟೀಶ್ ಪಾರ್ಲಿಮೆಂಟ್‌ನಲ್ಲಿ ಒಂದು ರೀತಿಯ ವಿದ್ಯಮಾನಕ್ಕೆ



ಕಾರಣವಾಯಿತು. ಇಂಗ್ಲೆಂಡ್ ಪಾರ್ಲಿಮೆಂಟ್ ಭಾರತ ದೇಶದಲ್ಲಿ ತನ್ನ ಆಡಳಿತವನ್ನು ಬಿಗಿಗೊಳಿಸಲು ಪೊಲೀಸ್ ಕಾಯಿದೆಯನ್ನು ತಿದ್ದುಪಡಿ ಮಾಡಿ ಅವರಿಗೆ ಹೆಚ್ಚಿನ ನಿಯಂತ್ರಣಾಧಿಕಾರವನ್ನು ವಿಸ್ತರಿಸಿತು. ಜೊತೆಗೆ ಕರ, ತೆರಿಗೆಗಳನ್ನು ಕಟ್ಟುನಿಟ್ಟುಗೊಳಿಸಿತು. ಇದೇ ಘಟನೆ ಭಾರತೀಯರಲ್ಲಿ ದೇಶಪ್ರೇಮ, ದೇಶಭಕ್ತಿಯನ್ನುಂಟು ಮಾಡಿತು. ಧಾರ್ಮಿಕ ಭಾವನೆಗಳು ಭಾವನಾತ್ಮಕ ವಿಚಾರಗಳಾಗಿದ್ದರಿಂದ ಸಹಜವಾಗಿ ದೇಶದಲ್ಲಿ ವಿದ್ಯುತ್ಸಂಚಾರವಾದಂತಾಯಿತು. ೧೮೫೭ರಲ್ಲಿ ನಡೆದ ಈ ಘಟನೆಯಿಂದಾಗಿ ದೇಶದ ಹಲವು ಕಡೆಗಳಲ್ಲಿ ಬಿಡಿ ಬಿಡಿಯಾದ ಇದೇ ಉದ್ದೇಶದ ಚಟುವಟಿಕೆಗಳು ನಡೆದವು. ರಾಷ್ಟ್ರಮಟ್ಟದಲ್ಲಿ ಚಿಂತನೆ ನಡೆಸುತ್ತಿದ್ದ ನಾಯಕರು ಈ ಉತ್ಸಾಹ, ಮನೋಧರ್ಮಗಳಿಗೆ ಸಂಘಟನಾತ್ಮಕ ಸ್ವರೂಪ ನೀಡಬೇಕೆಂಬ ಉದ್ದೇಶದಿಂದ ಸಂಸ್ಥೆಯೊಂದರ ರಚನೆ–ಸ್ಥಾಪನೆಗೆ ಮೊದಲು ಮಾಡಿದರು.

ಕಲಕತ್ತೆಯ ಪರಿಷತ್ತಿನಲ್ಲಿ ಸುರೇಂದ್ರನಾಥ ಬ್ಯಾನರ್ಜಿ ಹ್ಯೂಮರ್‌ನ ಪ್ರೇರಣೆಯಿಂದ ಕಾಂಗ್ರೆಸ್ ಎಂಬ ಹೆಸರಿನಲ್ಲಿ ರಾಷ್ಟ್ರೀಯ ಸ್ಫೂರ್ತಿ ಪ್ರೇರಣೆ ಯನ್ನುಂಟು ಮಾಡುವ ಸಂಘಟನಾ ಸಂಸ್ಥೆಯೊಂದನ್ನು ಸ್ಥಾಪಿಸುವ ಯೋಚನೆ ಮಾಡಿದರು. ಕಾಂಗ್ರೆಸ್ ಸ್ಥಾಪನೆಯ ಪ್ರಥಮಾಧಿವೇಶನವನ್ನು ಪುಣೆಯಲ್ಲಿ ಸಂಘಟಿಸಬೇಕೆಂದು ಯೋಜನೆ ರೂಪಿಸಲಾಯಿತು. ಆದರೆ ಪುಣೆಯಲ್ಲಿ ಪ್ಲೇಗ ಕಾಯಿಲೆಯು ಉಲ್ಬಣ ಸ್ಥಿತಿಯಲ್ಲಿದ್ದುದರಿಂದ ಮುಂಬಯಿಗೆ ಸ್ಥಳಾಂತರಿಸಲಾಯಿತು. ೨೮ರಿಂದ ೩೦ರ ಡಿಸೆಂಬರ್ ೧೮೮೫ರಲ್ಲಿ ಮುಂಬಯಿಯಲ್ಲಿ ಕಾಂಗ್ರೆಸ್‌ನ ಪ್ರಥಮ ಅಧಿವೇಶನ ನಡೆಯಿತು. ಕಲಕತ್ತೆಯ ನಾಮಾಂಕಿತ ಬ್ಯಾರಿಸ್ಟರ್ ಆದ ಉಮೇಶಚಂದ್ರ ಬ್ಯಾನರ್ಜಿ ಸರ್ವಾಧ್ಯಕ್ಷರಾಗಿದ್ದರು. ಅಖಂಡ ಭಾರತದಿಂದ ಒಟ್ಟು ಎಪ್ಪತ್ತೆರಡು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಅದರಲ್ಲಿ ಕನ್ನಡ ಮಾತನಾಡುವ ಪ್ರದೇಶದಿಂದ ನಾಲ್ವರು ಪ್ರತಿನಿಧಿಗಳು ಮಾತ್ರ ಭಾಗವಹಿಸಿದ್ದರು. ಆ ನಾಲ್ವರಲ್ಲಿ ಮೂವರು ಬಳ್ಳಾರಿ ಜಿಲ್ಲೆಯ ಬಳ್ಳಾರಿ ನಗರದವರು– ಕೋಲಾಚಲಂ ವೆಂಕಟರಾವ್, ಸಭಾಪತಿ ಮೊದಲಿಯಾರ್ ಮತ್ತು (ಅನಂತಪುರದ) ಗುತ್ತಿ ಕೇಶವ ಪಿಳ್ಳೈ. ಈ ಮೂವರಲ್ಲಿ ಕೋಲಾಚಲಂ ವೆಂಕಟರಾವ್ ಅವರು ಹೊಸಪೇಟೆ ಸಮೀಪದ ಕಮಲಾಪುರದವರು.

ಯೌವ್ವನದಲ್ಲಿ ವಿದ್ಯಾಭ್ಯಾಸಕ್ಕಾಗಿ ತಮ್ಮ ಭಾವನ ಪೋಷಕತ್ವದಲ್ಲಿರಲು ಬಳ್ಳಾರಿಗೆ ತೆರಳಿದರು. ಕೋಲಾಚಲಂ ವೆಂಕಟರಾವ್ ಆ ಕಾಲಕ್ಕೆ ಇಂಗ್ಲೆಂಡಿಗೆ ಹೋಗಿ ಶಿಕ್ಷಣ ಪಡೆದಿದ್ದರು. ಬಳ್ಳಾರಿ ಪರಿಸರದಲ್ಲಿ ಉನ್ನತ ಶಿಕ್ಷಣ ಪಡೆದಿದ್ದ ಆರಂಭಿಕರಲ್ಲಿ ಅಗ್ರಪಂಕ್ತಿಯವರು. ಶ್ರೇಷ್ಠ ವಕೀಲರಾಗಿದ್ದುದಷ್ಟೇ ಅಲ್ಲದೇ ನಿರಂತರ ಕಾರ್ಯತತ್ಪರತೆ, ವಿಶಾಲ ಓದುಗಾರಿಕೆಯಲ್ಲಿದ್ದವರು. ದೇಶದ ವಿದ್ಯಮಾನಗಳನ್ನು ಗ್ರಹಿಸಿದ್ದ ಅವರು ರಾಷ್ಟ್ರೀಯ ಪ್ರಜ್ಞೆಯನ್ನು ರೂಪಿಸಿಕೊಂಡಿದ್ದ ರಾಷ್ಟ್ರವಾದಿಗಳೂ ಆಗಿದ್ದರು. ವಕೀಲರಾಗಿಯೂ ಹೆಸರು ಮಾಡಿದ್ದರಿಂದ ಸಹಜವಾಗಿ ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದರು. ಬಳ್ಳಾರಿಯಲ್ಲಿ ಕೆಳವರ್ಗದವರಿಗಾಗಿ ವಸತಿ, ವಿಧವಾ ವಿವಾಹ ಮೊದಲಾದ ಸಾಮಾಜಿಕ ಸೇವಾಕಾರ್ಯದಲ್ಲಿ ಗುರುತಿಸಿಕೊಂಡಿದ್ದರು. ಹೀಗಾಗಿ ಸಹಜವಾಗಿ ೧೮೮೫ ರಲ್ಲಿ ಮುಂಬಯಿಯಲ್ಲಿ ನಡೆದ ಕಾಂಗ್ರೆಸ್ ಎಂಬ ರಾಷ್ಟ್ರೀಯ ಸಂಘಟನಾತ್ಮಕ ಸಂಸ್ಥೆಯ ರಚನೆ ಮತ್ತು ಸ್ಥಾಪನೆಯ ಪ್ರಥಮ ಅಧಿವೇಶನದಲ್ಲಿ ಪಾಲ್ಗೊಳ್ಳುವುದು ಸಾಮುದಾಯಿಕ ಹೊಣೆಗಾರಿಕೆಯೂ ಆಗಿತ್ತು. ಮುಂಬಯಿಯಲ್ಲಿ ಎ.ಓ.ಹ್ಯೂಮ್, ನರೇಂದ್ರನಾಥ ಬ್ಯಾನರ್ಜಿ, ವಾಮನ ಶಿವರಾಮ್ ಆಪಟೆ, ಗಂಗಾಪ್ರಸಾದ್, ದಾದಾಭಾಯಿ ನವರೋಜಿ, ಕಾಶೀನಾಥ ತಿಂಬಕ, ನಾರಾಯಣ ಗಣೇಶ ಚಂದಾವರಕರ, ರಂಗೈನಾಯಿಡು, ಎಸ್. ಸುಬ್ರಹ್ಮಣ್ಯ ಅಯ್ಯರ್, ಎಂ. ವೀರರಾಘವಾಚಾರಿ, ಆರ್. ರಘುನಾಥರಾವ್, ಆರ್.ಜಿ.ಭಂಡಾರಕರ ಮೊದಲಾದ ನೇತಾರರ ಪರಿಚಯ, ಒಡನಾಟ, ಸಂವಾದಗಳಲ್ಲಿ ತೊಡಗಿಸಿಕೊಂಡಿದ್ದರು. ವಿಶೇಷವಾಗಿ ಪ್ರಥಮ ಅಧಿವೇಶನದ ಅಧ್ಯಕ್ಷರಾದ ಉಮೇಶ್‌ಚಂದ್ರ ಬ್ಯಾನರ್ಜಿಯವರ ಪರಿಚಯವೂ ಕೋಲಾಚಲಂ ವೆಂಕಟರಾವ್ ಅವರಿಗಿತ್ತು. ಮುಂಬಯಿಯಲ್ಲಿ ಪ್ರಭಾವಿಗಳಾಗಿದ್ದ ರಾಷ್ಟ್ರಖ್ಯಾತಿಯ ಲೋಕನಾಯಕ ಬಾಲಗಂಗಾಧರ ತಿಲಕ ಅವರೊಂದಿಗೆ ಆಪ್ತ ಸಂಬಂಧವೂ ವೆಂಕಟರಾವ್ ಅವರಿಗಿತ್ತು. ಅಷ್ಟೇ ಅಲ್ಲದೇ, ತಮ್ಮ ಕಿರಿಯ ಸಹೋದರ ಕೋಲಾಚಲಂ ಶ್ರೀನಿವಾಸರಾಯರು ವಕೀಲಿ ವೃತ್ತಿಯ ಜೊತೆಗೆ ಹವ್ಯಾಸಿ ರಂಗಭೂಮಿ, ರಂಗ ಚಟುವಟಿಕೆಗಳಲ್ಲಿದ್ದು ೧೯೦೫ರಲ್ಲಿ ಬಳ್ಳಾರಿಯಲ್ಲಿ ನಿರ್ಮಿಸಿದ್ದ 'ಶ್ರೀಶಾರದಾ ವಿಲಾಸ ಮಂದಿರ' ಎಂಬ ರಂಗಮಂದಿರದ



ಉದ್ಘಾಟನೆಗೆ ಬಳ್ಳಾರಿಗೆ ಬಾಲಗಂಗಾಧರ ತಿಲಕರನ್ನು ಆಮಂತ್ರಿಸಿ, ಜೊತೆಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಯುವಕರಿಗೆ ಪ್ರೇರಣೆ ನೀಡಿಸುತ್ತಾರೆ.

ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರವೇಶ ಪೂರ್ವದಲ್ಲಿ ಪ್ರಭಾವಿ ಮತ್ತು ಕಾಂತಗುಣ ವ್ಯಕ್ತಿತ್ವವನ್ನು ಪಡೆದಿದ್ದ ಬಾಲಗಂಗಾಧರ ತಿಲಕ ಬಳ್ಳಾರಿಗೆ ಆಗಮಿಸಿದ್ದು ದೊಡ್ಡ ವಿಷಯವಾಗಿತ್ತು. 'ಶ್ರೀ ಶಾರದ ವಿಲಾಸ ಮಂದಿರ' ರಂಗಮಂದಿರದ ಉದ್ಘಾಟನೆಗೆ ಸ್ವಾತಂತ್ರ್ಯ ಹೋರಾಟಗಾರರೂ ರಾಷ್ಟ್ರವಾದಿಗಳೂ ಆಗಿದ್ದ ಹೊಸಪೇಟೆಯ ಚಿತ್ತವಾಡಿಗಿ ಹನುಮಂತಗೌಡ ಅವರ ನೇತೃತ್ವದ ತಂಡವೂ ಭಾಗಿಯಾಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟದ ಉಗ್ರಗುಣ ಸ್ವಭಾವದ ನಾಯಕರಾಗಿದ್ದ ಬಾಲಗಂಗಾಧರ ತಿಲಕ ಅವರ ಬಳ್ಳಾರಿಯ ಆಗಮನವೂ ಬಳ್ಳಾರಿಯ ಯುವಕರಲ್ಲಿ ಉತ್ಸಾಹ ತಂದಿತ್ತು. ವಿಶೇಷವಾಗಿ ಹೊಸಪೇಟೆಯಲ್ಲಿ ಈ ಕಾಲಕ್ಕಾಗಲೇ ಚಿತ್ತವಾಡಿಗಿ ಹನುಮಂತಗೌಡರ ನಾಯಕತ್ವದಲ್ಲಿ ಒಂದು ತಂಡವೇ ಸಿದ್ಧಗೊಂಡಿತ್ತು. ಅದು ಜಾತ್ಯತೀತವಾಗಿಯೂ ಇದ್ದುದು ವಿಶೇಷ. ಬಾಲಗಂಗಾಧರ ತಿಲಕ ಅವರು ಬೆಳಗಾವಿ, ಧಾರವಾಡ, ಗದಗ ಭಾಗಗಳಲ್ಲಿ ನಿಯಮಿತವಾಗಿ ಆಗಮಿಸುತ್ತಿದ್ದುದು ಬಳ್ಳಾರಿ ಯುವಕರಲ್ಲಿ ಪ್ರೇರಣೆ ನೀಡಿತು. ಹೊಸಪೇಟೆಯ ಚಿತ್ತವಾಡಿಗಿ ಹನುಮಂತಗೌಡರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ೧೯೦೫ರಲ್ಲಿ ಧಾರವಾಡದಲ್ಲಿ ನಡೆದ ಮುಂಬಯಿ ಪ್ರಾಂತಿಕ ರಾಜಕೀಯ ಸಮಾವೇಶದಲ್ಲಿ ಫಿರೋಜ್ ಷಾ ಮೆಹತಾ ಅವರು ತಿಲಕರೊಂದಿಗೆ ಆಗಮಿಸಿದ ಉತ್ಸಾಹ ಭರಿತ ಕಾರ್ಯಕ್ರಮದಲ್ಲಿ ಹೊಸಪೇಟೆಯ ಚಿತ್ತವಾಡಿಗಿ ಹನುಮಂತಗೌಡರು ಭಾಗವಹಿಸಿದ್ದು ಹೆಮ್ಮೆಯ ವಿಷಯವಾಗಿತ್ತು. ಇಂಥ ಪ್ರೇರಣಾದಾಯಕ ವ್ಯಕ್ತಿತ್ವದ ಬಾಲಗಂಗಾಧರ ತಿಲಕರು ಬಳ್ಳಾರಿಗೆ ಬಂದಿದ್ದು ಸಂತೋಷದ ವಿಚಾರವಾಗಿದ್ದರಿಂದ ಚಿತ್ತವಾಡಿಗಿ ಹನುಮಂತಗೌಡರು ಹೊಸಪೇಟೆಯ ಯುವ ಉತ್ಸಾಹಿ ಚಳುವಳಿಗಾರರೊಂದಿಗೆ ಪಾಲ್ಗೊಂಡಿದ್ದರು.

ಬಾಲಗಂಗಾಧರ ತಿಲಕರು ಬಳ್ಳಾರಿಗೆ ಆಗಮಿಸಿದುದು ಆಮಂತ್ರಿತ ಕಾರ್ಯಕ್ರಮದ ನಿಮಿತ್ತವಾಗಿದ್ದರೂ ಅದನ್ನು ಸ್ವಾತಂತ್ರ್ಯ ಹೋರಾಟದ ಒಂದು

ಭಾಗವಾಗಿಯೇ ಪರಿಗಣಿಸಿದ್ದರು. ಆ ಸಂದರ್ಭದಲ್ಲಿ ಮಾತಿನ ಮಧ್ಯೆ, **"ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಿಂದ ನಮಗೆ ಬಹಳ ಲಾಭವಾಯಿತು: ನಾವು ಇದರಿಂದ ಪಾಠ ಕಲಿಯಬೇಕು"**–ಎಂದು ಪ್ರಾಸಂಗಿಕವಾದ ವಿಚಾರವನ್ನು ಪ್ರಸ್ತುತ ಪಡಿಸಿದರು. ಶತ್ರುಗಳನ್ನು ವಿಜಯನಗರದ ಅರಸರು ಸದೆಬಡಿದು ವಿಶಾಲ ಸಾಮ್ರಾಜ್ಯವೊಂದನ್ನು ನಿರ್ಮಿಸಿದಂತೆ ಬ್ರಿಟೀಶರನ್ನು ದೇಶದಿಂದ ಹೊಡೆದೋಡಿಸಿ ಸ್ವತಂತ್ರ ಭಾರತವನ್ನು ನಿರ್ಮಿಸಬೇಕು ಎಂಬುದು ಬಾಲಗಂಗಾಧರ ತಿಲಕರ ಸಂದೇಶವೂ ಆಗಿತ್ತು. ತಿಲಕರಿಗೆ ವಿಜಯನಗರ ಸಾಮ್ರಾಜ್ಯದ ಬಗ್ಗೆ ಮಾಹಿತಿ ದೊರಕಿದ್ದು ಶ್ರೀ ಶಾರದಾ ವಿಲಾಸ ಮಂದಿರದ ಮಾಲೀಕರಾಗಿದ್ದ ಕೋಲಾಚಲಂ ಶ್ರೀನಿವಾಸರಾಯರು ಮೂರು ಭಾಷೆಗಳಲ್ಲಿ ಬರೆದಿದ್ದ 'ವಿಜಯನಗರ ಸಾಮ್ರಾಜ್ಯ ಪತನ' (ತೆಲುಗಿನಲ್ಲಿ ವಿಜಯನಗರ ಸಾಮ್ರಾಜ್ಯ ಪತನಮು, ಇಂಗ್ಲಿಷ್‌ನಲ್ಲಿ ದಿ ಫಾಲ್ ಆಫ್ ವಿಜಯನಗರ) ನಾಟಕದಿಂದ, ಉದ್ಘಾಟನಾ ಸಮಾರಂಭದ ಅಂಗವಾಗಿ ಈ ನಾಟಕದ ಪ್ರದರ್ಶನವೂ ನಡೆದಿತ್ತು. ಪಠಾಣ್ ರುಸ್ತುಂನ ಪಾತ್ರದಲ್ಲಿ ಖ್ಯಾತ ರಂಗನಟ ಬಳ್ಳಾರಿ ರಾಘವ ಅವರ ಮನೋಜ್ಞ ಅಭಿನಯ ಮನಸೆಳೆದಿತ್ತು. ಕೋಲಾಚಲಂ ಅವರ ಈ ನಾಟಕ ರಚನೆಗೆ ಪ್ರೇರಣೆ ದೊರಕಿದ್ದು ಬಳ್ಳಾರಿ ಡಿಸ್ಟ್ರಿಕ್ಟ್ ಕಲೆಕ್ಟರ್ ಆಗಿದ್ದ ರಾಬರ್ಟ್ ಸಿವೆಲ್ ಅವರು ಜಿಲ್ಲಾ ವ್ಯಾಪ್ತಿಯ ಹೊಸಪೇಟೆ ಸಮೀಪದ ಹಂಪಿ ವಿಜಯನಗರವನ್ನು ಕುರಿತು ಕ್ಷೇತ್ರಕಾರ್ಯ ಮತ್ತು ಗ್ರಂಥಗಳ ಅಧ್ಯಯನದಿಂದ ರಚಿಸಿದ **'The Forgotten Empire'** ಕೃತಿಯೇ. ಹೀಗೆ ಒಂದು ಕೃತಿಯು ನಾಟಕಕ್ಕೆ ಪ್ರೇರಣೆ ನೀಡಿ, ಆ ನಾಟಕ ದೇಶದ ಅಗತ್ಯವೊಂದಕ್ಕೆ ಸ್ಫೂರ್ತಿ ನೀಡುವ ಮಟ್ಟಕ್ಕೆ ಬೆಳೆದದ್ದು ಇಲ್ಲಿ ವಿಶೇಷ ಗಮನದಲ್ಲಿ ಮೂಡುವ ವಿಚಾರವಾಗಿದೆ.

ಇದು ಮೂರನೇ ಹಂತದ್ದಾದರೆ, ನಾಲ್ಕನೆಯ ಹಂತದಲ್ಲಿ ೧೯೨೦ರ ಅಸಹಕಾರ ಚಳುವಳಿ. ೧೯೨೦ರಲ್ಲಿ ಭಾರತೀಯ ಸ್ವಾತಂತ್ರ್ಯ ಹೋರಾಟ ಗಾರರು ತಮ್ಮನ್ನು ಮತ್ತಷ್ಟು ಚುರುಕುಗೊಳಿಸಿಕೊಂಡ ಸಂದರ್ಭವಾಗಿದೆ. ಭಾರತದ ಸ್ವಾತಂತ್ರ್ಯಾಪೇಕ್ಷೆ ತೀವ್ರಗೊಳ್ಳುತ್ತಿದ್ದುದಷ್ಟೇ ಅಲ್ಲದೇ, ಅದು ಸಂಘಟಿತ ವಾಗುತ್ತಿದ್ದುದನ್ನು ಗಮನಿಸಿದ ಬ್ರಿಟೀಶ್ ಆಳ್ವಿಕೆಯು ಭಾರತವನ್ನು ನಿಯಂತ್ರಿಸಲು



ಪೊಲೀಸ್ ಇಲಾಖೆಗೆ ಅತಿಶಯವಾದ ಅಧಿಕಾರವನ್ನು ನೀಡಿತು. ಇದಕ್ಕೆ ಮುಖ್ಯ ಕಾರಣವೆಂದರೆ, ಇಪ್ಪತ್ತನೇ ಶತಮಾನದ ಆರಂಭದ ದಶಕಗಳಲ್ಲಿ ಹೋರಾಟಗಾರರು ಉಗ್ರಮಾರ್ಗವನ್ನು ತುಳಿಯುತ್ತಿದ್ದಂತೆ, ಬ್ರಿಟೀಶ್ ವಸಾಹತು ಸರಕಾರ ೧೯೧೯ರ ಫೆಬ್ರುವರಿಯಲ್ಲಿ ರೌಲತ್ ಕಾಯಿದೆಯನ್ನು ಜಾರಿಗೊಳಿಸಿತು. ಮದ್ರಾಸ್ ಪ್ರಾವೆನ್ಸಿಯಲ್ಲಿ ಮುಂಚೂಣಿ ವಕೀಲರೂ ಮತ್ತು ದೇಶಮಟ್ಟದ ಕಾನೂನಿನ ಬಗ್ಗೆ ಪ್ರಜ್ಞಾಪೂರ್ವಕವಾಗಿ ಸ್ಪಂದಿಸುತ್ತಿದ್ದ ಹೊಸಪೇಟೆಯ ಹಿರಿಯ ವಕೀಲರೂ ಸಾಹಿತಿಗಳೂ ಉತ್ತಮ ವಾಗ್ಮಿಗಳೂ ಆಗಿದ್ದ ಮೈದೂರು ತಿರುಮಲಾಚಾರ್ ಅವರು ಹೊಸಪೇಟೆಯಲ್ಲಿ ರೌಲತ್ ಕಾಯಿದೆಯ ಪರಿಣಾಮವನ್ನು ಮತ್ತು ಅದರಿಂದ ಸಾಮಾಜಿಕವಾಗಿ ಉಂಟಾಗುತ್ತಿದ್ದ ವಿಲೋಮ ಸ್ಥಿತಿಯ ಬಗ್ಗೆ ಮನವರಿಕೆ ಮಾಡಿ ಕೊಡುತ್ತಿದ್ದರು. ಹೊಸಪೇಟೆಯಲ್ಲಿ ಪ್ರಭಾವಿ ವಕೀಲರಾಗಿದ್ದ ಮೈಸೂರು ತಿರುಮಲಾಚಾರ್ ಅವರನ್ನು ಕಂಡರೆ ಪೊಲೀಸರು ಹೆಚ್ಚು ಜಾಗೂರುಕತೆಯಿಂದ ವರ್ತಿಸುತ್ತಿದ್ದರು. ಮಹಾತ್ಮಾ ಗಾಂಧೀಜಿಯವರು ರೌಲತ್ ಕಾಯಿದೆಯ ವಿರುದ್ಧ ಕಾನೂನು ಸಮರ ನಡೆಸುವುದಕ್ಕಿಂತಲೂ ಜನಾಂದೋಲನ ಮೂಲಕವೇ ಬಿಸಿ ಮುಟ್ಟಿಸಬೇಕೆಂದು ಕರೆ ನೀಡಿದರು. ಮಹಾತ್ಮ ಗಾಂಧೀಜಿಯವರ ಈ ಕರೆ ದೇಶದಲ್ಲಿ ಜನರಲ್ಲಿ ಸ್ವಾತಂತ್ರ್ಯೋತ್ಸಾಹದ ಯುವಕರನ್ನಾಗಿಸಿತು. ಎರಡು ಕಾರ್ಯಸೂಚಿಯನ್ನು ಈ ಪ್ರತಿಕ್ರಿಯಾತ್ಮಕ ಅಸಮಾಧಾನವು ವ್ಯಕ್ತಪಡಿಸಬೇಕಾಗಿತ್ತು. ಮೊದಲನೆಯದು ಪ್ರತಿಬಂಧಿತ ಸಾಹಿತ್ಯವನ್ನು ಸಾರ್ವಜನಿಕವಾಗಿ ಮಾರಾಟ ಮಾಡಿ ಬಂಧಿತರಾಗುವುದು. ಎರಡನೆಯದಾಗಿ, ಅಖಿಲ ಭಾರತ ವ್ಯಾಪ್ತಿಯಲ್ಲಿ ಹರತಾಳವನ್ನು ರೂಪಿಸುವುದು. ಈ ಎರಡೂ ಕಾರ್ಯಗಳು ಹೊಸಪೇಟೆಗೆ ಸಂಬಂಧಿಸಿದಂತೆ ಹೇಳುವುದಾದರೆ ಹೆಚ್ಚು ಪರಿಣಾಮಕಾರಿಯಾಗಿ ನಡೆಯಿತು. ಶಾಲಾ ವಿದ್ಯಾರ್ಥಿಗಳು ಹೊಸಪೇಟೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಸೇರಿಕೊಂಡರು. ರೌಲತ್ ಕಾಯಿದೆಯನ್ನು ಅನುಷ್ಠಾನಗೊಳಿಸುವ ಅನುಬಂಧದಲ್ಲಿ ನಡೆಯುತ್ತಿದ್ದ ಸ್ವಾಭಿಮಾನ–ದೇಶಾಭಿಮಾನ ಮತ್ತು ರಾಷ್ಟ್ರಪ್ರೇಮಕ್ಕೆ ಧಕ್ಕೆ ತರುತ್ತಿದ್ದ ಚಟುವಟಿಕೆಗಳು ಭಾರತೀಯರಲ್ಲಿ ಕಿಚ್ಚು ಮತ್ತು ಕೆಚ್ಚು ಎರಡನ್ನೂ ಉಂಟು ಮಾಡಿದ್ದವು. ರೌಲತ್ ಕಾಯಿದೆ, ಜಲಿಯನ್ ವಾಲಾಬಾಗ್, ಖಿಲಾಫತ್ ಚಳುವಳಿ, ಮಾಪಿಳ್ಳೆ ದಂಗೆಗಳು ಬ್ರಿಟೀಶರ ಆಡಳಿತ ನೀತಿಯ ಬಲಪ್ರಯೋಗದ ಅತಿರೇಕದ ವರ್ತನೆ

ಗಳಾಗಿದ್ದವು. ಆದರೆ ಇದು ದೇಶದಾದ್ಯಂತ ವ್ಯಾಪಕವಾದ ಪೂರಕ ಸಂಘಟನೆಗಳು ಜನ್ಮತಾಳಿದವು. ಹೊಸಪೇಟೆಯಲ್ಲಿ ವಿದ್ಯಾರ್ಥಿಗಳೂ, ವಕೀಲರೂ, ವ್ಯಾಪಾರಿಗಳೂ ತಮ್ಮ ವ್ಯಾಪ್ತಿಯಲ್ಲಿ ತಮ್ಮ ಮಿತಿಯಲ್ಲಿ ಸಂಘಟನೆಗಳನ್ನುಂಟು ಮಾಡಿ ಸಾಮಾಜಿಕವಾಗಿ ಅಶಾಂತಿಯನ್ನು ನಿರ್ಮಿಸಿ ರೌಲತ್ ಕಾಯಿದೆಗೆ ತಮ್ಮ ವಿರೋಧವನ್ನು ರೂಪಿಸಿದರು. ಬಳ್ಳಾರಿ ನಗರ, ಹೊಸಪೇಟೆ ನಗರವೂ ಸೇರಿದಂತೆ, ಎಲ್ಲಾ ತಾಲೂಕು ಕೇಂದ್ರಗಳಲ್ಲಿ ರಾಷ್ಟ್ರಮಟ್ಟದ ಘೋಷಣೆಗಳಾದ ಒಂದು : ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತೊರೆಯುವುದು, ಎರಡು: ವಕೀಲರು ತಮ್ಮ ವೃತ್ತಿಯನ್ನು ತ್ಯಜಿಸುವುದು. ಮೂರು: ಕೌನ್ಸಿಲ್ ಚುನಾವಣೆಗಳನ್ನು ಬಹಿಷ್ಕರಿಸುವುದು, ನಾಲ್ಕು: ಬಿರುದು–ಪ್ರಶಸ್ತಿಗಳನ್ನು ಸರಕಾರಕ್ಕೆ ಹಿಂದಿರುಗಿಸುವುದು–ಈ ನಾಲ್ಕು ರಾಷ್ಟ್ರಮಟ್ಟದ ಕಾರ್ಯಸೂಚಿಗಳು ಹೊಸಪೇಟೆಯಲ್ಲಿ ಅರ್ಥಪೂರ್ಣವಾಗಿ ಪೂರೈಕೆಯಾದವು.

ಕಾಂಗ್ರೆಸ್ ಸಂಘಟನೆಯ ಕಾರ್ಯಕರ್ತರು, ಸದಸ್ಯರು, ರಾಷ್ಟ್ರವಾದಿ ಜನಸಾಮಾನ್ಯರು ಈ ವಿದ್ಯಮಾನದ ಮೂಲಕ ವಿಸ್ತಾರಗೊಂಡರು.

ಆಗಸ್ಟ್ ೧, (೧೯೨೦)ರಂದು ದೇಶದಾದ್ಯಂತ ಅಸಹಕಾರ ಚಳುವಳಿಯು ವಿಧ್ಯುಕ್ತವಾಗಿ ಆರಂಭವಾಯಿತು. ಹೊಸಪೇಟೆಗೆ ಸಂಬಂಧಿಸಿದಂತೆ ಅರ್ಥಪೂರ್ಣ ಸ್ಪಂದನ ನಡೆಯಿತು. ಜಿಲ್ಲೆಯಲ್ಲಿಯೇ ಕ್ರಿಯಾಶೀಲರಾಗಿದ್ದ ಕಲ್ಲೂರು ಸುಬ್ಬಾರಾವ್, ವೆಂಕಟರಮಣಾಚಾರ್ಯರು ಹೊಸಪೇಟೆಯನ್ನು ತಮ್ಮ ಚಟುವಟಿಕೆಗಳ ಪಶ್ಚಿಮ ತಾಲೂಕುಗಳ ಕೇಂದ್ರವನ್ನಾಗಿಸಿಕೊಂಡಿದ್ದರು. ನೂರಾರು ಯುವಕರು ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಯ ದೀಕ್ಷೆ ಪಡೆದರು. ೧೯೨೦–೨೧ರ ಈ ಅಸಹಕಾರ ಚಳುವಳಿಯು ಜಿಲ್ಲಾ ಮಟ್ಟದಲ್ಲಿ ಯಶಸ್ವಿಯಾಗಿ 'ನಮ್ಮ ರಾಷ್ಟ್ರೀಯ ಹೊಣೆಗಾರಿಕೆ'ಯನ್ನು ಪ್ರಕಟಪಡಿಸಬೇಕೆಂಬ ಉದ್ದೇಶದಿಂದ ನೇತ್ರಹಳ್ಳಿ ಸಂಜೀವರಾಯ, ಬಾದನಹಟ್ಟಿ ವೆಂಕೋಬರಾಯ, ಟೇಕೂರು ನಾರಾಯಣ ಶಾಸ್ತ್ರಿ, ಲ್ಯಾಂಗ್ಲಿ ಭೀಮಸೇನರಾಯ, ಬೆಲ್ಲದ ಚನ್ನಪ್ಪ, ಆರ್. ನಾಗನಗೌಡ, ದಳವಾಯಿ ಅಂಬಣ್ಣ, ಪತ್ತಿಕೊಂಡ ಗುರುನಾಥ ಶೆಟ್ಟಿ ಮೊದಲಾದವರು ಹೊಸಪೇಟೆ ಕೇಂದ್ರದಲ್ಲಿ ಜಿಲ್ಲೆಯ ಪಶ್ಚಿಮ ತಾಲೂಕುಗಳನ್ನು ಜಾಗೃತಗೊಳಿಸಿದರು.



ಬಾದನಹಟ್ಟಿ ವೆಂಕೋಬರಾಯರಂತೂ ಮಹಾತ್ಮಾ ಗಾಂಧೀಜಿಯವರ ಸರಳ ಮತ್ತು ತತ್ತ್ವನಿಷ್ಠ ಬದುಕಿನಿಂದ ಪ್ರಭಾವಿತರಾಗಿ, ಜಿಲ್ಲೆಯ ಗ್ರಾಮಾಂತರ ಭಾಗಗಳಲ್ಲಿ ಸಂಚರಿಸಿ, ಸರಳತೆಯನ್ನು ಮೆರೆದರು. ಗಾಂಧೀಜಿಯವರಂತೆ ಒಂದು ದಟ್ಟಿಯನ್ನು ಸೊಂಟಕ್ಕೆ ಸುತ್ತಿಕೊಂಡು, ಖಾದಿ ವಸ್ತ್ರಧಾರಿಗಳಾಗಿ ಜೀವನ ಪರ್ಯಂತ ಅದೇ ಬದುಕು ಸಾಗಿಸಬೇಕೆಂದು ತೀರ್ಮಾನ ಮಾಡಿ ಪ್ರೇರಣಾದಾಯಕ ಆದರ್ಶವನ್ನು ಮೆರೆದರು. ಬಳ್ಳಾರಿಯ ಜನತೆ ಅವರನ್ನು "ಬಳ್ಳಾರಿಯ ಗಾಂಧೀ ತಾತ" ಎಂದೇ ಸಂಬೋಧಿಸುತ್ತಿದ್ದರು. ಹೊಸಪೇಟೆಯ ಯುವಜನಾಂಗವು, ವಿಶೇಷವಾಗಿ ವ್ಯಾಪಾರಿ ಯುವಕರು ಖಾದಿ ವಸ್ತ್ರಧಾರಿಗಳಾಗಿ ಅಸಹಕಾರ ಚಳುವಳಿಗೆ ಸ್ಪಂದಿಸಿದ್ದರು.

* * *

೧೯೨೦–೨೧ ಇದೇ ಕಾಲಾವಧಿಯಲ್ಲಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಭಾವನಾತ್ಮಕ ಅಂಶಗಳ ಸ್ಪರ್ಶ ಉಂಟಾಯಿತು. ತಮ್ಮ ಹೋರಾಟವನ್ನು ವ್ಯಾಪಕಗೊಳಿಸಬೇಕೆಂಬ ಉದ್ದೇಶದಿಂದ ಭಾಷಾವಾರು ಕಾಂಗ್ರೆಸ್ ರಚನೆ ಆಗಬೇಕು ಎಂದು ತೀರ್ಮಾನಿಸಲಾಯಿತು. ೧೯೨೦ರಲ್ಲಿ ಮುಂಬಯಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿತವಾಗಿ ನಿರ್ಣಯವನ್ನು ಅಂಗೀಕರಿಸಲಾದ ಗೊತ್ತುವಳಿಯ ಪ್ರಕಾರ ದೇಶದಲ್ಲಿ ಕಾಂಗ್ರೆಸ್ ಸಂಘಟನೆಯನ್ನು ವಿಕೇಂದ್ರೀಕರಣಗೊಳಿಸಬೇಕೆಂಬ ಉದ್ದೇಶದಿಂದ ಭಾಷಾವಾರು ರಾಜ್ಯ, ಜಿಲ್ಲಾ ಕಾಂಗ್ರೆಸ್ ಪ್ರಾಂತೀಕ ಸಮಿತಿಗಳನ್ನು ರಚಿಸಬೇಕೆಂದು ತೀರ್ಮಾನವಾಯಿತು. ಕರ್ನಾಟಕದ ಗಡಿಭಾಗದ ಜಿಲ್ಲೆಗಳಲ್ಲಿ ಇದು ಸ್ವಲ್ಪ ಮಟ್ಟಿನ ಗೊಂದಲಕ್ಕೆ ಕಾರಣವಾಯಿತೇ ವಿನಾ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆ ಒಂದು ಸಮಸ್ಯೆಯನ್ನೇ ಇದು ಸೃಷ್ಟಿಸಿತು. ಸ್ವಾತಂತ್ರ್ಯ ಹೋರಾಟದಂಥ ಮೊದಲ ಮತ್ತು ಅಂತಿಮ ಉದ್ದೇಶವನ್ನೇ ಮರೆತು ಸಲ್ಲದ ವಿಚಾರಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಲಾಗಿತ್ತು. ಸಮಸ್ಯೆಗೆ ಮುಖ್ಯ ಕಾರಣವೆಂದರೆ, ಬಳ್ಳಾರಿ ನಗರವನ್ನೂ ಸೇರಿಸಿಕೊಂಡಂತೆ, ಬಳ್ಳಾರಿ ಜಿಲ್ಲೆಯನ್ನು ಕನ್ನಡಪರ ಕಾಂಗ್ರೆಸ್ ಸಮಿತಿ ಎಂದು ಕರೆಯಬೇಕೋ? ಅಥವಾ ತೆಲುಗುಪರ ಕಾಂಗ್ರೆಸ್ ಸಮಿತಿ ಎಂದು ಪರಿಭಾವಿಸಬೇಕೋ? ತೆಲುಗುಪರ ಹೋರಾಟಗಾರರ ವಾದ

ಏನಾಗಿತ್ತೆಂದರೆ, ಬಳ್ಳಾರಿ ನಗರವೂ ಸೇರಿದಂತೆ, ಜಿಲ್ಲೆಯನ್ನೇ ಆಂಧ್ರಪ್ರದೇಶದ ಒಂದು ಜಿಲ್ಲಾ ಘಟಕವೆಂದು ತೀರ್ಮಾನಿಸಿಬಿಟ್ಟಿತ್ತು. ಇದು ಸಹಜವಾಗಿ ಸ್ವಾಭಿಮಾನಿ ಕನ್ನಡಿಗರ ರೋಷಾವೇಶಕ್ಕೆ ಕಾರಣವಾಗಿತ್ತು. ಹೀಗಾಗಿ ೧೯೨೦ರಲ್ಲಿ ಬಳ್ಳಾರಿಯಲ್ಲಿ ಎರಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ರಚನೆಯಾಗಿ ಅಸ್ತಿತ್ವದಲ್ಲಿಯೂ ಇದ್ದವು. ಇವೆರಡೂ ಸಮಿತಿಗಳು ತಮ್ಮ ಉದ್ದೇಶವನ್ನೇ ಮರೆತು ಕಿತ್ತಾಟಕ್ಕೆ ಮೊದಲಾಗಿದ್ದವು. ಇದೇ ಕಾಲಘಟ್ಟದಲ್ಲಿ ದೇಶದಾದ್ಯಂತ ಅಸಹಕಾರ ಚಳುವಳಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಮಹಾತ್ಮಾ ಗಾಂಧೀಜಿಯವರು ಜನಜಾಗೃತಿಗಾಗಿ ಸಂಚಾರ ಕೈಕೊಂಡರು. ಹೀಗಿದ್ದಾಗ, ಅಕ್ಟೋಬರ್ ೧, ೧೯೨೧ರಂದು ಬಳ್ಳಾರಿಗೆ ಭೇಟಿ ನೀಡಿದರು. ಬಳ್ಳಾರಿಯಲ್ಲಿದ್ದ ಎರಡು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಮನಸ್ತಾಪ, ವೈಮನಸ್ಸುಗಳಿಂದಾಗಿ ಸೌಹಾರ್ದ ವಾತಾವರಣ ಗಾಂಧೀಜಿಯವರಿಗೆ ಲಭ್ಯವಾಗಲಿಲ್ಲ. ಗಾಂಧೀಜಿಯವರ ಭೇಟಿಯ ವಿಷಯ ಮೊದಲೇ ತಿಳಿದಿದ್ದರಿಂದ ಜಿಲ್ಲೆಯ ಬೇರೆ ತಾಲೂಕುಗಳಿಂದ ಪ್ರಮುಖರು ಬಳ್ಳಾರಿಗೆ ಹೋಗಿದ್ದರು. ಅದರಂತೆ, ಹೊಸಪೇಟೆಯಿಂದಲೂ ಉತ್ಸಾಹಿ ಯುವಕರು ಪ್ರಮುಖರ ನೇತೃತ್ವದಲ್ಲಿ ಬಳ್ಳಾರಿಗೆ ಹೋಗಿದ್ದರು. ಬಳ್ಳಾರಿಯ ಪ್ರತಿಕೂಲ ವಾತಾವರಣವು ಗಾಂಧೀಜಿಯವರಿಗೂ ಹೊರಗಿನಿಂದ ಬಂದಿದ್ದವರಿಗೆ ಅಹಿತಕರ ಘಟನೆಯೆಂಬಂತೆಯೇ ಕಂಡು ಬಂದಿತು.

ಅಂದೇ (೧ ಅಕ್ಟೋಬರ್ ೧೯೨೧) ಗಾಂಧೀಜಿಯವರು ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಲು ತೀರ್ಮಾನಿಸಿದರು. ಭಾಷಣಕ್ಕೆ 'ಆಂಧ್ರ ನಾಟಕ ಪಿತಾಮಹಾ' ಎಂದು ಖ್ಯಾತರಾಗಿದ್ದ ಧರ್ಮಾವರಂ ರಾಮಕೃಷ್ಣಾಮಾಚಾರ್ಯ ನಿವಾಸದ ಪ್ರಾಂಗಣದಲ್ಲಿ ಏರ್ಪಾಟಾಗಿತ್ತು. ಗಾಂಧೀಜಿಯವರ ದೇಶದ ಸ್ಥಿತಿಗತಿಗಳನ್ನು ನಮ್ಮ ಭಾವೈಕ್ಯಗುಣದಿಂದ ಎದುರಿಸಬೇಕೆಂದು ಸಾರಿದರು. ಅವರ ಹಿಂದಿ ಭಾಷಣವನ್ನು ಧರ್ಮಾವರಂ ರಾಮಕೃಷ್ಣಮಾಚಾರ್ಯರ ಕೊನೆಯ ಮಗ ಭೋಗೀಂದ್ರನಾಥ ತೆಲುಗಿಗೆ ಭಾಷಾಂತರಿಸಿದರು.

ದುರಾದೃಷ್ಟದ ವಿಚಾರವೆಂದರೆ, ಗಾಂಧೀಜಿಯವರ ಆತಿಥ್ಯದ ಹೊಣೆಗಾರಿಕೆಯನ್ನು ಯಾವುದೇ ಕಾಂಗ್ರೆಸ್ ಸಮಿತಿಯವರು ವಹಿಸಿಕೊಳ್ಳದೇ



ಇದ್ದುದು. ಬಳ್ಳಾರಿ ಪ್ರವೇಶ ಸಂದರ್ಭದಲ್ಲಿಯೂ ನಿರ್ಗಮಿಸುವ ಸಂದರ್ಭದಲ್ಲಿಯೂ ಯಾವ ಸದಸ್ಯರು ಇಲ್ಲದಿದ್ದುದು ಗಾಂಧೀಜಿಯವರಿಗೂ ಬೇಸರ ಮೂಡಿಸಿತ್ತು. ಗಾಂಧೀಜಿಯವರಿಗೆ ರೈಲು ಟಿಕೆಟ್ ಕೊಡಿಸುವ ವ್ಯವಸ್ಥೆಯನ್ನು ಕೂಡ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಮಾಡಿರಲಿಲ್ಲ. ಹೀಗಾಗಿ ಗಾಂಧೀಜಿಯವರು ಹಲವು ತಾಸುಗಳವರೆಗೆ ರೈಲ್ವೆ ನಿಲ್ದಾಣದ ಒಂದು ಭಾಗದಲ್ಲಿ ಕಲ್ಲು ಹಾಸಿನ ಮೇಲೆಯೇ ರಾತ್ರಿಯೆಲ್ಲಾ ಕಳೆದು ಬೆಳಗಿನ ಜಾವ ಆಂಧ್ರಪ್ರದೇಶದ ಕಡೆಗೆ ತಮ್ಮ ಪ್ರವಾಸವನ್ನು ಮುಂದುವರೆಸುತ್ತಾರೆ. (ಅವರ ತಂಗಿದ್ದ ಸ್ಥಳವನ್ನು ಒಂದು ಸ್ಮಾರಕವಾಗಿಸಿ ಬಳ್ಳಾರಿಯ ರೈಲ್ವೆ ನಿಲ್ದಾಣದಲ್ಲಿ ಕಾಯ್ದಿರಿಸಲಾಗಿದೆ)

* * *

**೧೯೨೪:** ಬಳ್ಳಾರಿ ಜಿಲ್ಲೆಯ ಮತ್ತು ಹೊಸಪೇಟೆಯ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ಮತ್ತು ಅಭಿಮಾನ ಹೆಮ್ಮೆಗಳನ್ನು ಮೂಡಿಸಿದ ಸಂದರ್ಭವಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ ಅರ್ಥಪೂರ್ಣವಾಗಿ ಸ್ಪಂದಿಸಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವೇ ಸಾಕ್ಷಿ. ಕನ್ನಡ ನಾಡಿನಲ್ಲಿ ನಡೆಯಿತು ಎಂಬ ಮೊದಲ ಮಹಾತ್ಮ ಗಾಂಧೀಜಿಯವರು ಆ ಅಧಿವೇಶನದ ಘನ ಅಧ್ಯಕ್ಷತೆಯನ್ನು ವಹಿಸಿದ್ದರು ಎಂಬ ಎರಡನೆಯ, ಬಳ್ಳಾರಿ ಜಿಲ್ಲೆಯ ಹೆಚ್ಚಿನ ಸಂಖ್ಯೆಯ ಹೋರಾಟಗಾರರು ಅದರಲ್ಲಿ ಪಾಲ್ಗೊಂಡಿದ್ದರು ಎಂಬ ಮೂರನೆಯ–ಹೀಗೆ ಹಲವು ಕಾರಣಗಳಿಂದ ಗಮನ ಸೆಳೆಯುತ್ತದೆ. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ೩೯ನೇ ಕಾಂಗ್ರೆಸ್ ಅಧಿವೇಶನದಲ್ಲಿ ಬಳ್ಳಾರಿ ಜಿಲ್ಲೆ, ಬಳ್ಳಾರಿ, ಹೊಸಪೇಟೆ ಮತ್ತು ಮುಖ್ಯವಾಗಿ ಹಂಪಿಗಳ ನಡುವೆ ಸ್ಮರಣಾರ್ಹವಾದ ಅಂಶಗಳು ಗಮನ ಸೆಳೆಯುತ್ತವೆ. ಸ್ವಾಗತ ಸಮಿತಿಯ ೧೯ ಜನ ಉಪಾಧ್ಯಕ್ಷರಲ್ಲಿ ಬಳ್ಳಾರಿಯ ಸಭಾಪತಿ ಮೊದಲಿಯಾರರೂ ಒಬ್ಬರು. ಬೆಳಗಾವಿಯ ಟಿಳಕವಾಡಿ ಬಡಾವಣೆಯ ಮೊದಲೇ ಗೇಟ್‌ನಿಂದ ಎರಡನೇ ಗೇಟ್ ವರೆಗಿನ ೮೫ ಎಕರೆ ವಿಸ್ತಾರದ ಮೈದಾನದಲ್ಲಿ ಅಧಿವೇಶನ ಆಯೋಜಿಸಲಾಗಿತ್ತು. ಸಭಾಂಗಣಕ್ಕೆ 'ವಿಜಯನಗರ'

ಎಂದು ಹೆಸರಿಡಲಾಗಿತ್ತು. ಸ್ವಾಗತ ಮಂಟಪಕ್ಕೆ 'ವಿರೂಪಾಕ್ಷ' ಎಂದು ಹೆಸರಿಸಿ, ದೇವಸ್ಥಾನದ ಗೋಪುರದ ಮಾದರಿಯಲ್ಲಿ ನಿರ್ಮಿಸಲಾಗಿತ್ತು. ಕಾಂಗ್ರೆಸ್ ಅಧಿವೇಶನಕ್ಕೆ ಬಂದಿದ್ದ ಕಾರ್ಯಕರ್ತರಿಗೆ ನೀರಿನ ಅನುಕೂಲಕ್ಕೆ ಬಾವಿಯನ್ನು ಹೊಸದಾಗಿ ನಿರ್ಮಿಸಲಾಗಿತ್ತು. ಚಾರಿತ್ರಿಕವಾಗಿ 'ಕಾಂಗ್ರೆಸ್ ಬಾವಿ' ಎಂದು ಕರೆಯಲಾಗುತ್ತಿದೆಯಾದರೂ ಅಧಿವೇಶನ ಸಂದರ್ಭದಲ್ಲಿ 'ಪಂಪಾಸರೋವರ' ಎಂದು ನಾಮಕರಣ ಮಾಡಲಾಗಿತ್ತು. ಮುಖ್ಯದಾರಿಗಳಿಗೆ 'ಹಕ್ಕ ಮಾರ್ಗ' ಮತ್ತು 'ಬುಕ್ಕಮಾರ್ಗ'ಗಳೆಂದು ಹೆಸರಿಸಲಾಗಿತ್ತು. ಈ ಎಲ್ಲಾ ಅಂಶಗಳು ಕನ್ನಡ ನಾಡಿನ ಅಸ್ಮಿತೆ–ಅಭೀಪ್ಸೆಗಳನ್ನು ಆ ಮೂಲಕ ರಾಷ್ಟ್ರದ ಗಮನಕ್ಕೆ ತರುವ ಉದ್ದೇಶವಾಗಿತ್ತಾದರೂ ಆ ಎಲ್ಲಾ ಶೀರ್ಷಿಕೆಗಳಿಗೆ ಹೊಸಪೇಟೆ ಸಮೀಪದ 'ಹಂಪಿ ವಿಜಯನಗರ'ಗಳ ಪೌರಾಣಿಕತೆ ಚಾರಿತ್ರಿಕತೆಗಳೆ ಮೂಲ ಪ್ರೇರಣೆಗಳಾಗಿವೆ ಎಂಬುದು ಗಮನಿಸಬೇಕಾದ ಅಂಶ.

ಈ ಅಧಿವೇಶನವು ಬಳ್ಳಾರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೆ ತಮ್ಮ ಮನೆಯಲ್ಲಿಯೇ ನಡೆದಂತೆನಿಸಿತ್ತು. ಹೊಸಪೇಟೆಯ ಬೆಲ್ಲದ ಚನ್ನಪ್ಪ, ಪತ್ತಿಕೊಂಡ ಗುರುನಾಥ ಶೆಟ್ಟಿ, ಗಣಪತೆಪ್ಪ, ಜಿ.ಬಿ. ಗದಿಗೆಪ್ಪ ಮೊದಲಾದವರು ವಿಶೇಷ ಆಸಕ್ತಿಯಿಂದ ಭಾಗವಹಿಸಿದ್ದರು. ಟಿ.ಬಿ. ಕೇಶವರಾವ್, ಟಿ.ಬಿ. ಜಯಲಕ್ಷ್ಮೀಬಾಯಿ, ಶಂಕರ ಶಾಸ್ತ್ರಿ, ಶೆಟ್ರು ಚೂಡಪ್ಪ, ಇಜಾರಿ ವಸುಪಾಲಪ್ಪ, ಮುದೇನೂರ ಕೊಟ್ರಬಸಪ್ಪ, ದಂಡಿನ ರಾಮರಾಯ, ಬಾದನಹಟ್ಟಿ ವೆಂಕೋಬರಾವ್, ಬೂದಿಹಾಳ ಅನಂತಾಚಾರ್, ಮತ್ತಿಹಳ್ಳಿ ರಾಘವೇಂದ್ರ ರಾವ್, ಸಂಡೂರು ವೆಂಕಟ ಭೀಮಾಚಾರ್ಯ, ತಟ್ಟಿ ಕೃಷ್ಣರಾವ್, ಟೇಕೂರ ಸುಬ್ರಹ್ಮಣ್ಯ, ಅಸುಂಡಿ ತಿರುಮಲರಾವ್ ಮೊದಲಾದ ಹೋರಾಟಗಾರರು ಬಳ್ಳಾರಿ ಜಿಲ್ಲೆಯಿಂದ ಭಾಗವಹಿಸಿದರು.

* * *

**೧೯೩೦:** ಸವಿನಯ ಕಾಯಿದೆ ಭಂಗ ಚಳುವಳಿ–ಬಳ್ಳಾರಿ ಹೊಸಪೇಟೆಗಳನ್ನು ಚುರುಕುಗೊಳಿಸಿದ ಮತ್ತೊಂದು ಸಂದರ್ಭ. ಮಹಾತ್ಮ ಗಾಂಧೀಜಿ ಒಬ್ಬ ಪ್ರಭಾವಿಯಾಗಿ, ಸ್ವಾತಂತ್ರ್ಯ ಹೋರಾಟ ಬದುಕಿನ ಒಂದು ಭಾಗವಾಗಿ, ದೇಶ ಸ್ವತಂತ್ರವಾಗಬೇಕು ಎಂಬುದು ಜೀವನಧರ್ಮವಾಗಿ ಕನ್ನಡ ನಾಡಿನ ವರಂತೆಯೇ ಬಳ್ಳಾರಿ ಜಿಲ್ಲೆಯನ್ನೂ ಆವರಿಸಿತ್ತು. ೧೯೨೪ರ ಬೆಳಗಾವಿ ಅಧಿವೇಶನದಿಂದ ಉತ್ತೇಜಿತರಾದ ಬಳ್ಳಾರಿಗರು ೧೯೨೬ರಲ್ಲಿ ಸಣ್ಣ ಪುಟ್ಟ ವ್ಯಾಪ್ತಿಯಲ್ಲಿ ಸಭೆ ಸಮಾರಂಭಗಳನ್ನು ಮಾಡಿದರು. ೧೯೩೦ರಲ್ಲಿ ನಡೆದ ಲಾಹೋರಿನ ಕಾಂಗ್ರೆಸ್ ಅಧಿವೇಶನವು ಜವಾಹರಲಾಲ್ ನೆಹರೂ ಅಧ್ಯಕ್ಷತೆಯಲ್ಲಾಯಿತು. ಆ ಅಧಿವೇಶನದಲ್ಲಿ ಗೊತ್ತುವಳಿ ಮಂಡಿತವಾಗಿ, ಅಂಗೀಕಾರಗೊಂಡ ನಿರ್ಣಯವೆಂದರೆ, ದೇಶದಾದ್ಯಂತ ಸವಿನಯ ಕಾಯಿದೆ ಭಂಗ ಚಳುವಳಿ. ಇದು ಅಸಹಕಾರ ಚಳುವಳಿಯ ಮುಂದುವರಿದ ಭಾಗ. ೨೬ ಜನವರಿ ೧೯೩೦ರಲ್ಲಿ ನಡೆದ ನಿರ್ಣಯಕ್ಕೆ ಎಂಥ ದೇಶದಾದ್ಯಂತ ರಚನಾತ್ಮಕ ಪ್ರತಿಕ್ರಿಯೆ ಪ್ರಶಂಸೆಗಳು ಮೂಡಿಬಂದುವೆಂದರೆ, ನಿರ್ಣಯ ಕೈಗೊಂಡ ದಿನವನ್ನು 'ಸ್ವಾತಂತ್ರ್ಯ ದಿನ'ವನ್ನಾಗಿ ಆಚರಿಸಲಾಯಿತು. ೧೯೪೭ರಲ್ಲಿ ದೇಶ ಅಧಿಕೃತವಾಗಿ ಸ್ವತಂತ್ರಗೊಳ್ಳುವವರೆಗೂ ಅಂದರೆ ೧೯೩೦ರಿಂದ ೧೯೪೭ರವರೆಗೆ ಹದಿನೆಂಟು ವರ್ಷಗಳವರೆಗೆ ಜನವರಿ ೨೬ ದಿನವನ್ನು ಸ್ವಾತಂತ್ರ್ಯ ದಿನವೆಂದೇ ದೇಶ ಆಚರಿಸಿತು. ಹೊಸಪೇಟೆಯ ದೇಶಭಕ್ತ ಹೋರಾಟಗಾರರು ಹಳ್ಳಿಗಳಲ್ಲಿ, ಶಾಲೆಗಳಲ್ಲಿ ಸಾಂಕೇತಿಕವಾಗಿ ಇದನ್ನು ತಿಳಿಸಿ ಪರಿಮಿತಿಯಲ್ಲಿ ಆಚರಿಸಲಾಯಿತು.



ಸವಿನಯ ಕಾಯಿದೆ ಭಂಗ ಚಳುವಳಿ–ತನ್ನ ಉದ್ದೇಶದ ಅರ್ಥವನ್ನು ಕಳೆದುಕೊಳ್ಳಬಹುದೆಂದು ಅರ್ಥಮಾಡಿಕೊಂಡ ಮಹಾತ್ಮಾ ಗಾಂಧೀಜಿಯವರು ತಮ್ಮ ವಿರೋಧ ಪ್ರತಿಭಟನೆ ಅಸಮಾಧಾನಗಳನ್ನು ವ್ಯಕ್ತ ಪಡಿಸಲು ಮತ್ತು ಸಾಂಕೇತಿಕವಾಗಿ ಆಚರಿಸಲು ಆರಿಸಿಕೊಂಡ ವಸ್ತು–ಉಪ್ಪು. ಉಪ್ಪನ್ನು ತಯಾರಿಸುವ ಹಾಗೂ ಮಾರಾಟದ ಚಟುವಟಿಕೆಗಳ ಮೇಲೆ ಬ್ರಿಟೀಶ ಸರಕಾರವು ತೆರಿಗೆ ವಿಧಿಸಿತ್ತು. ಉಪ್ಪಿನ ಮೇಲೆ ತೆರಿಗೆ ವಿಧಿಸಿದ್ದ ಕಾನೂನನ್ನು ಮುರಿಯಲು ಗಾಂಧೀಜಿ ನಿರ್ಧರಿಸಿದರು. ಅದೊಂದು ವಿಶಿಷ್ಟ ರೀತಿಯ ಚಳುವಳಿ ಪ್ರಕಾರ. ೧೨ ಮಾರ್ಚ್ ೧೯೩೦ರಂದು ತಮ್ಮ ಸಾಬರಮತಿ ಆಶ್ರಮದಿಂದ ಎಪ್ಪತ್ತೊಂದು ಅನುಯಾಯಿಗಳೊಂದಿಗೆ ಹೊರಟು ಏಪ್ರಿಲ್ ೬ರಂದು ಸಮುದ್ರ ದಂಡೆಯ 'ದಂಡಿ' ಎಂಬ ಸ್ಥಳದಲ್ಲಿ ಉಪ್ಪಿನ ಕಾಯಿದೆ ಮುರಿಯುವ ಕಾರ್ಯಕ್ರಮವನ್ನು

ಗಾಂಧೀಜಿ ರೂಪಿಸಿದರು. ವಿಶೇಷವೆಂದರೆ, ಅದೊಂದು ಅಹಿಂಸಾತ್ಮಕ ಚಳುವಳಿಯಾಗಿತ್ತು. ಆ ಕಾರಣಕ್ಕಾಗಿ ಅದು ಜನಪ್ರಿಯವೂ ಪರಿಣಾಮಕಾರಿಯೂ ಆಗಿತ್ತು. ಆ ಕಾರಣಕ್ಕಾಗಿತೇ ಬ್ರಿಟೀಶರು ಮಹಾತ್ಮ ಗಾಂಧೀಜಿಯವರ ಧೀಃಶಕ್ತಿಯನ್ನು ಕಂಡು ಹೆದರಿದರು. ಸ್ವಾತಂತ್ರ್ಯ ಚಳುವಳಿಯು ದೇಶವ್ಯಾಪ್ತಿ ಜನಸಾಮಾನ್ಯರನ್ನು ಒಳಗೊಳ್ಳುತ್ತಿದ್ದದ್ದನ್ನು ಗುರುತಿಸಿದರು. ಜನಸಾಮಾನ್ಯರನ್ನು ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದರಿಂದ ಈ ದೇಶದ ಜನತೆ, ತಾವು ಸ್ವಾತಂತ್ರ್ಯಾಪೇಕ್ಷೆಯ ಪ್ರಜೆಗಳಾಗಬೇಕೆಂಬ ಅಪೇಕ್ಷೆ ಹೊಂದಿದರು. ಇದರ ಪರಿಣಾಮ ಬಳ್ಳಾರಿ ಹೊಸಪೇಟೆಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆ ನಡೆಸಬೇಕೆಂಬ ತೀರ್ಮಾನಗೊಂಡಿತು.

ಸವಿನಯ ಕಾಯಿದೆ ಭಂಗಕ್ಕೆ ಬಳ್ಳಾರಿ–ಹೊಸಪೇಟೆ ರಚನಾತ್ಮಕವಾಗಿ ಪ್ರತಿಸ್ಪಂದಿಸಿದ್ದು ಈ ಭಾಗದ ಜನತೆಯ ಕ್ರಿಯಾಶೀಲತೆಯನ್ನು–ಸಾಮುದಾಯಿಕ ಹೊಣೆಗಾರಿಕೆಗಳನ್ನು ಎತ್ತಿ ತೋರಿಸುತ್ತದೆ. ರಾಜ್ಯದ ನಾಯಕರು ಬಳ್ಳಾರಿಯಲ್ಲಿ ೨೩ ಫೆಬ್ರವರಿ ೧೯೩೦ರಂದು ನಡೆಸಲು ತೀರ್ಮಾನಿಸಿದರು. ಕರ್ನಾಟಕದಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿಯನ್ನು ವ್ಯವಸ್ಥಿತವಾಗಿ ರೂಪಿಸುವ ಉದ್ದೇಶಕ್ಕಾಗಿ ಬಳ್ಳಾರಿಯ ಸಭೆಯಲ್ಲಿ ಒಂದು ಮಂಡಳಿಯನ್ನು ರಚಿಸಲಾಯಿತು. ಆ ಮಂಡಳಿ–ಕಾರ್ನಾಡ್ ಸದಾಶಿವರಾಯ, ಆರ್. ಆರ್. ದಿವಾಕರ, ಕೌಜಲಗಿ ಹನುಮಂತರಾಯ, ಗಂಗಾಧರರಾವ್ ದೇಶಪಾಂಡೆ, ನಾ.ಸು. ಹರ್ಡೀಕರ. ಬಳ್ಳಾರಿ ಹೊಸಪೇಟೆಯನ್ನು ಕೇಂದ್ರೀಕರಿಸಲು ಟೇಕೂರು ಸುಬ್ರಹ್ಮಣ್ಯಂ ಮತ್ತು ಕೆ. ಗುರುರಾಜರಾವ್ ಅವರನ್ನು ಈ ಸಮಿತಿಯಲ್ಲಿ ಸೇರಿಸಿಕೊಳ್ಳಲಾಯಿತು. ಇದೇ ರೀತಿಯ ಸಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ರಚಿಸಲು ತೀರ್ಮಾನಿಸಿ, ಬಳ್ಳಾರಿಯ ಟೇಕೂರು ಸುಬ್ರಹ್ಮಣ್ಯಂ, ವಿ.ಎಂ.ಗಿರಿ, ಹೊಸಪೇಟೆಯ ಮತ್ತಿಹಳ್ಳಿ ರಾಘವೇಂದ್ರರಾವ್ ಮತ್ತು ಹರಪನಹಳ್ಳಿಯ ಇಜಾರಿ ವಸುಪಾಲಪ್ಪ ಇವರುಗಳನ್ನೊಳಗೊಂಡ ಸಮಿತಿ ಸಿದ್ಧಪಡಿಸಲಾಯಿತು. ಸವಿನಯ ಕಾಯಿದೆ ಭಂಗ ಚಳುವಳಿ ಬಾಬ್ತು ನಿಧಿ ಸಂಗ್ರಹಿಸಲು ಮೊದಲಾಯಿತು. ಈ ಸಮಿತಿಗೆ ಹೊಸಪೇಟೆಯ ತಟ್ಟಿ ಕೃಷ್ಣರಾವ್ ಅವರು ದೊಡ್ಡ ಪ್ರಮಾಣದಲ್ಲಿ ನಿಧಿ ಸಂಗ್ರಹಿಸಿಕೊಟ್ಟರು. ಇವರ ಜೊತೆಗೆ ಬೆಲ್ದೋಣಿ ಭೀಮರಾಯ, ಕನಕಾಪುರಂ ಗುರುರಾಜರಾವ್, ಡಿ.ಎಸ್.ಹನುಮಂತರಾವ್–ನಿಧಿ ಸಂಗ್ರಹಿಸಿ ರಾಜ್ಯಸಮಿತಿಗೆ ತಲುಪಿಸಿದವರು.



ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ, ದಂಡಿಯಾತ್ರೆಗಳಲ್ಲಿ ಜಾಣ್ಮೆಯನ್ನು ಅರ್ಥಮಾಡಿಕೊಂಡ ದೇಶದ ಜನತೆ ತಮ್ಮ ತಮ್ಮ ವ್ಯಾಪ್ತಿಯಲ್ಲಿ ಅದನ್ನು ಮುಂದುವರೆಸಿದರು. ಗಾಂಧೀಜಿಯವರ ಭಾರತೀಯರ ಜೀವನಧರ್ಮದ ಬಗ್ಗೆ ಕಾಳಜಿ ವಹಿಸಿ–ಅಪೇಕ್ಷಿಸಿದ್ದ ಮದ್ಯಪಾನ ವಿರೋಧಿ ಚಳುವಳಿ, ಹರಿಜನ ಸುಧಾರಣೆ, ಅಸ್ಪೃಶ್ಯತೆ ನಿವಾರಣೆ, ಹರಿಜನರಿಗೆ ದೇವಾಲಯ ಪ್ರವೇಶ ಮುಂತಾದ ರಚನಾತ್ಮಕ ಕಾರ್ಯಗಳ ಬಗ್ಗೆ ಬಳ್ಳಾರಿ ಜನತೆ, ಹೊಸಪೇಟೆ ಜನತೆ ಜಾರಿಗೆ ತಂದರು. ಹಳ್ಳಿ ಹಳ್ಳಿಗೆ ಸಂಚಾರ ಮಾಡಿ ಮನವರಿಕೆ ಮಾಡಿಕೊಟ್ಟರು. ಮನೆಯ ಮುಂದಿನ ಆವರಣಗಳಲ್ಲಿ ಸತ್ಯಾಗ್ರಹ ಯೋಜನೆಯನ್ನು ರೂಪಿಸಲಾಯಿತು. ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್, ಹೆಂಡದಂಗಡಿಗಳ ವಾರ್ಷಿಕ ಲಿಲಾವು...ಹೀಗೆ ಮೊದಲಾದ ಸಮಾಜೋರಾಷ್ಟ್ರೀಯ ಯೋಜನೆಗಳನ್ನು ರೂಪಿಸಲಾಯಿತು.

* * *

**೧೯೩೪:** ೧೯೩೪ರ ಮಾರ್ಚ್ ಮೊದಲ ವಾರದಲ್ಲಿ ಮಹಾತ್ಮ ಗಾಂಧೀಜಿಯವರು ಮಾಡಿದ ಬಳ್ಳಾರಿ ಜಿಲ್ಲಾ ಪ್ರವಾಸವು ಬಳ್ಳಾರಿ ಜಿಲ್ಲಾ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿಯೇ ಮಹತ್ವ ಪಡೆಯಿತು. ಗಾಂಧೀಜಿಯವರದು ಇದು ಜಿಲ್ಲೆಗೆ ಎರಡನೇ ಭೇಟಿಯಾಗಿತ್ತಾದರೂ ಮೊದಲ ಘಟನೆಯಲ್ಲಿ ಅನುಭವಿಸಿದ ಅಪಮಾನ, ಹಿಂಜರಿಕೆ, ಕಹಿ ಪ್ರಸಂಗಗಳನ್ನು ಅಳಿಸಿ ಹಾಕುವಂತೆ ಎರಡನೇ ಪ್ರವಾಸವು ಅತ್ಯಂತ ಯಶಸ್ವಿಯಾಗಿತ್ತು. ೧೯೩೦ರ ಸವಿನಯ ಕಾಯಿದೆ ಭಂಗ ಚಳುವಳಿಯನ್ನು ಬಗ್ಗು ಬಡಿಯಲು ಬ್ರಿಟೀಶ್ ಆಳ್ವಿಕೆ ರೂಪಿಸಿದ್ದ ತಂತ್ರಗಾರಿಕೆಗಳು ಬಹುಪಾಲಿನಲ್ಲಿ ಫಲ ಕಂಡಿದ್ದವು. ಅದರ ಒಂದು ಭಾಗವಾಗಿ ೧೯೩೩ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ದುಂಡುಮೇಜಿನ ಪರಿಷತ್ತು ಒಂದು. ೧೯೩೦–೩೩ರ ಈ ಅವಧಿಯಲ್ಲಿ ಭಾರತದ ಉತ್ಸಾಹ ಉತ್ತುಂಗಕ್ಕೇರಿ ನಿಸ್ತೇಜಗೊಳ್ಳಲಾರಂಭಿಸಿತು. ಕಾಕತಾಳೀಯವೆಂಬಂತೆ ೧೯೩೩ರ

ದುಂಡುಮೇಜಿನ ಪರಿಷತ್ತು ಸಭೆ ಒಂದು ರೀತಿಯಲ್ಲಿ ವರವಾಗಿ ಬಂದಿತ್ತು. ಇಂಗ್ಲೆಂಡ್‌ನ ಸಭೆಗೆ ಭಾರತದ ಏಕಮಾತ್ರ ಪ್ರತಿನಿಧಿಯಾಗಿ ಮಹಾತ್ಮ ಗಾಂಧೀಜಿ ಪಾಲ್ಗೊಂಡಿದ್ದರು. ಭಾರತವನ್ನು ಆಂತರಿಕವಾಗಿಯೂ ಸಾಮಾಜಿಕವಾಗಿಯೂ ಒಡೆದು ಆಳುವ ಬ್ರಿಟೀಶ್ ಆಡಳಿತ ನೀತಿ ಆ ಸಭೆಯಲ್ಲಿ ಬಹಿರಂಗಗೊಂಡಿತ್ತು. ಸಭೆಯಲ್ಲಿ ಬ್ರಿಟೀಶ್ ಸರಕಾರವು ನಮ್ಮ ವರ್ಗಗಳಿಗೆ ದೇಶದಾದ್ಯಂತ ಪ್ರತ್ಯೇಕ ಮತಕ್ಷೇತ್ರವನ್ನು ನೀಡುವ ತೀರ್ಮಾನ ಮಾಡಿತ್ತು. ಈ ತೀರ್ಮಾನವನ್ನು ಬಿ. ಆರ್. ಅಂಬೇಡ್ಕರ್ ಸ್ವಾಗತಿಸಿದ್ದರು.

ದಲಿತರಿಗೆ, ಹಿಂದುಳಿದ ಜನಾಂಗದವರಿಗೆ ಇದರಿಂದ ಜನಾದೇಶ ಲಭ್ಯವಾಗುತ್ತದೆ ಎಂದು ಅಂಬೇಡ್ಕರ್ ವಿಚಾರವಾಗಿದ್ದರಿಂದ ಈ ಅಭಿಪ್ರಾಯ ವನ್ನು ಸ್ವಾಗತಾರ್ಹವೆಂಬ ನಿಲುವನ್ನು ಬಹಿರಂಗಗೊಳಿಸಿದ್ದರು. ಆದರೆ ಪ್ರತ್ಯೇಕ ಮತಕ್ಷೇತ್ರವನ್ನು ಒದಗಿಸುವದರಿಂದ ಭಾರತೀಯ ಸಾಮಾಜಿಕ ವಿಚ್ಛಿದ್ರಕಾರಿಯಾದೀತೆಂಬ ಆತಂಕದಿಂದ ಗಾಂಧೀಜಿಯವರು ಸರಕಾರದ ನೀತಿಯಲ್ಲಿ ಸ್ವಾರ್ಥ, ಕುತಂತ್ರವನ್ನು ವಿರೋಧಿಸಿದರು. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ ನಡುವೆ ಭಿನ್ನಾಭಿಪ್ರಾಯ ಉಂಟಾಯಿತಾದರೂ ಇಬ್ಬರ ನಡುವಿನ ಪೂನಾ ಒಪ್ಪಂದ ಏರ್ಪಟ್ಟು ಪ್ರತ್ಯೇಕ ಮತಕ್ಷೇತ್ರದ ಸಮಸ್ಯೆ ಬಗೆಹರಿಯಿತು. ಆದರೆ ಈಗ ಗಾಂಧೀಜಿಯವರ ಮುಂದಿದ್ದ ಸವಾಲೆಂದರೆ, ದೇಶದ ದಲಿತ ಸಮುದಾಯವು ತಮ್ಮನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳ ಬಾರದು ಎಂದು ಮನವರಿಕೆ ಮಾಡಿಕೊಡಬೇಕಾಗಿತ್ತು. ಹೀಗಾಗಿ 'ಹರಿಜನ' ಕೇಂದ್ರಿತವಾಗಿ ನಿಧಿಸಂಗ್ರಹ, ಸಾಮಾಜಿಕ ಉನ್ನತೀಕರಣ, ದೇವಾಲಯ ಪ್ರವೇಶ ಮೊದಲಾದ ವಿಷಯಗಳನ್ನು ಕೈಗೆತ್ತಿಕೊಂಡು ಪರಿಹಾರಾತ್ಮಕವಾಗಿ ಯೋಜನೆ ರೂಪಿಸಿದರು. ಇದರ ಒಂದು ಭಾಗವೇ ದೇಶದಾದ್ಯಂತ ಪ್ರವಾಸ. ಇದರ ಒಂದು ಭಾಗವೇ ಮೂರು ದಿನಗಳ ಬಳ್ಳಾರಿ ಜಿಲ್ಲಾ ಪ್ರವಾಸ.

ಕಾರವಾರದಿಂದ ಆರಂಭಗೊಂಡ ಈ ಪ್ರವಾಸವು ೧೯೩೪ ಮಾರ್ಚ್ ೧ ರಿಂದ ೩ ರವರೆಗೆ ದಾವಣಗೆರೆಯ ಒಳದಾರಿ ಆವರಗೊಳ್ಳ, ಕೊಂಡಜ್ಜಿ ಮೂಲಕ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿದರು. ಗಾಂಧೀಜಿಯವರ ಕಾಂತ ವ್ಯಕ್ತಿತ್ವದಿಂದ ಪ್ರಭಾವಿತರಾಗಿದ್ದ ಹೊಸಪೇಟೆಗೆ ಸಮೀಪದ ಹಗರಿಬೊಮ್ಮನ



ಹಳ್ಳಿಯ ಹೋಬಳಿ ಬನ್ನಿಕಲ್ಲಿನ ಸಾಹುಕಾರ ವೀರಾಪುರದ ಈಶ್ವರಪ್ಪನವರು ಗಾಂಧೀಜಿಯವರ ಬಳ್ಳಾರಿ ಪ್ರವಾಸ ಸುಖದಾಯಕವಾಗಿರಲೆಂದು ಸ್ವತಃ ಒಂದು ಹೊಸ ಕಾರನ್ನು ಖರೀದಿಸಿ ತಾವೇ ಚಾಲಕರಾಗಿ ದಾವಣಗೆರೆಯಲ್ಲಿ ಸ್ವಾಗತಿಸಲು ಕೊಂಡೊಯ್ದಿದ್ದರು. ಅದೇ ಕಾರಿನಲ್ಲಿ ಗಾಂಧೀಜಿ ಪ್ರವಾಸವನ್ನೂ ಮಾಡಿದರು. ಪ್ರವಾಸ ಒಂದು ರಾತ್ರಿಯನ್ನು ಹರಪನಹಳ್ಳಿಯ ಮುನ್ಸಿಪಾಲಿಟಿ ಪ್ರೌಢಶಾಲೆಯಲ್ಲಿಯೂ, ಎರಡನೇ ರಾತ್ರಿಯನ್ನು ಸಂಡೂರಿನ ರಾಷ್ಟ್ರವಾದಿ ಗಳಾಗಿದ್ದ ಡಾ. ಎಸ್.ಬಿ. ಶರಾಫ್ ಅವರ ಮನೆಯಲ್ಲಿಯೂ ಕಳೆದರು. ಮೂರನೇ ದಿನ ಬೆಳಿಗ್ಗೆ ಶ್ರೀ ವಿಠೋಬದೇವರ ದರ್ಶನ ಪ್ರಾರ್ಥನೆ ಮುಗಿಸಿ ಬಳ್ಳಾರಿಗೆ ತಲುಪಿ ಅಲ್ಲಿ ಔಪಚಾರಿಕ ಕಾರ್ಯಕ್ರಮಗಳನ್ನು ಪೂರೈಸಿ ಬಳ್ಳಾರಿ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದಿಂದ ಹುಬ್ಬಳ್ಳಿಯ ಕಡೆ ಪ್ರವಾಸ ಮುಂದುವರೆಸಿದರು.

ಹೀಗೆ ಈ ಪ್ರವಾಸದಲ್ಲಿ ಮಾರ್ಗಮಧ್ಯೆ ಹೊಸಪೇಟೆ ನಗರಕ್ಕೂ ಆಗಮಿಸಿದರು. ಸ್ಥಳೀಯ ಮುಖಂಡರ ವಿನಂತಿಯ ಮೇರೆಗೆ ಹೊಸಪೇಟೆ ಯಲ್ಲಿಳಿದು ಸಭೆಯಲ್ಲಿ ಗಾಂಧೀಜಿ ಪಾಲ್ಗೊಂಡರು. ಕೆಲವು ನಿಮಿಷಗಳ ಅಂತರದಲ್ಲಿದ್ದ ಔಪಚಾರಿಕವಾಗಿ ನಿರ್ಮಿಸಿದ್ದ ವೇದಿಕೆಗೆ ಬಂದು ಪ್ರವಾಸದ ಉದ್ದೇಶವನ್ನು ಸಾರ್ವಜನಿಕರಿಗೆ ತಿಳಿಸಿದರು.

ವಾಸ್ತವವಾಗಿ ಬಳ್ಳಾರಿ ಜಿಲ್ಲೆಯ ಎರಡನೇ ಪ್ರವಾಸವು 'ಹರಿಜನ' ಕೇಂದ್ರಿತವಾಗಿದ್ದರಿಂದ ಮಹಾತ್ಮ ಗಾಂಧೀಜಿಯವರು ಸಾದ್ಯಂತವಾಗಿ ಅದರ ಸುತ್ತಲಿನ ವಿಚಾರ ಸಮಸ್ಯೆ ಪರಿಹಾರಗಳನ್ನೇ ಪ್ರಸ್ತುತ ಪಡಿಸುತ್ತಿದ್ದರು. ಹೊಸಪೇಟೆಯಲ್ಲಿ ಅವರು ಇಳಿಯುವ ಪೂರ್ವನಿಯೋಜಿತ ಕಾರ್ಯಕ್ರಮ ವಿರಲಿಲ್ಲವಾದರೂ ಬಹುಸಂಖ್ಯೆಯಲ್ಲಿದ್ದ ಚಳುವಳಿಗಾರರ ವಿನಂತಿ ಕಾರಣ ದಿಂದ ಹೊಸಪೇಟೆ ರೇಲ್ವೆ ನಿಲ್ದಾಣದಲ್ಲಿ ಇಳಿದು ಒಂದೆರಡು ಕಿಲೋ ಮೀಟರ್‌ಗಳವರೆಗೆ ನಡೆದುಕೊಂಡೇ ಬಂದು ಸಾರ್ವಜನಿಕ ವೇದಿಕೆಯಲ್ಲಿ ಭಾಷಣ ಮಾಡಿದರು. ಈ ಸಂದರ್ಭ ಹೊಸಪೇಟೆಗೆ ಸಂಬಂಧಿಸಿದಂತೆ ಬಹುಮುಖ್ಯ ಸಂದರ್ಭವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ಗಾಂಧೀಜಿಯವರ 'ದರ್ಶನ' ಮಾಡಿ ಕಾಂಗ್ರೆಸ್ ಕಾರ್ಯಕರ್ತರಾಗಲು ಮನಸ್ಸು ಮಾಡಿದರು.

ಆರ್ಥಿಕವಾಗಿ ಅನುಕೂಲವಾಗಿದ್ದವರು, ಹಣ, ಒಡವೆ, ವಸ್ತು, ವಸ್ತ್ರಗಳನ್ನು ನೀಡಿ ಗಾಂಧೀಜಿಯವರ ಮೂಲಕ ದೇಶದ ಅಗತ್ಯ ವಿದ್ಯಮಾನಕ್ಕೆ ನೇರ ಸ್ಪಂದಿಸಿದರು. ವಿಶೇಷವೆಂದರೆ ಕೆಳವರ್ಗದವರು, ಬಡವರು ಚಳುವಳಿಯ ಪರಿಧಿಯಲ್ಲಿ ಸೇರಿಕೊಂಡರು. ವೇದಿಕೆಯ ವ್ಯವಸ್ಥೆ ಮಾಡಿದ್ದವರು ತಮ್ಮನ್ನು ಪೂರ್ಣ ಪ್ರಮಾಣದ ತಾದಾತ್ಮ್ಯದಿಂದ ಮೂಡಿತು. ಚಿತ್ತವಾಡಿಗಿಯ ಬೆಲ್ಲದ ಚೆನ್ನಪ್ಪ, ತೊಡಗಿಸಿಕೊಂಡರು ಪತ್ತಿಕೊಂಡ ಗುರುನಾಥಶೆಟ್ಟಿ, ಆರ್. ನಾಗನಗೌಡ, ಮತ್ತಿಹಳ್ಳಿ ರಾಘವೇಂದ್ರರಾಯ, ಗಣಪತೆಪ್ಪ, ಜಿ.ಬಿ. ಗದಿಗೆಪ್ಪ ಮೊದಲಾದವರು ತನುಮನಧನಗಳಿಂದ ತಮ್ಮನ್ನು ತೊಡಗಿಸಿಕೊಂಡರು. "ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತು ಹಾಕಬೇಕು" ಎಂಬ ಗಾಂಧೀಜಿಯವರ ಒಂದು ವಾಕ್ಯದ ಮಹತ್ವವನ್ನು ಬೆಲ್ಲದ ಚೆನ್ನಪ್ಪ, ಅಸುಂಡಿ ತಿರುಮಲರಾವ್ ಅವರು ದೀಕ್ಷಾಮಂತ್ರದಂತೆ ಸ್ವೀಕರಿಸಿದರು. ಸಭೆಯಲ್ಲಿಯೇ ಹೊಸಪೇಟೆ ಪರಿಸರದಿಂದ ಸಂಗ್ರಹಿಸಿದ್ದ 'ಹರಿಜನ ನಿಧಿ'ಯನ್ನು ಗಾಂಧೀಜಿಗೆ ನೀಡಿದರು. ಅಲ್ಲಿಂದ ಮುಂದುವರೆದ ಗಾಂಧೀಜಿಯವರ ಪ್ರಾವಸವು ಕೊಪ್ಪಳ ಸಮೀಪದ ಬಾಣಾಪುರದಲ್ಲಿ ಒಂದು ನಿಲುಗಡೆ ಕಂಡು ಗದಗ, ಹುಬ್ಬಳ್ಳಿಯ ಮೂಲಕ ಮುಂದುವರೆಯುತ್ತದೆ.

ಮಹಾತ್ಮ ಗಾಂಧೀಜಿಯವರ ಸೂಕ್ಷ್ಮಶರೀರ ಮತ್ತು ಪ್ರಭಾವಲಯವನ್ನು ಗುರುತಿಸಿದ್ದ ಹೊಸಪೇಟೆಯ ದೇಶವಾದಿ ಜನರು ಸ್ವಯಂ ಪ್ರೇರಿತರಾಗಿ ದೇಶದ ಆಗು ಹೋಗುಗಳ ಬಗ್ಗೆ ಚಿಂತಿಸಲಾರಂಭಿಸಿದರು. ಇದು ಹೊಸಪೇಟೆಗೆ ಸಂಬಂಧಿಸಿದಂತೆ ಮಹತ್ವದ ಸಂದರ್ಭ. ಸವಿನಯ ಕಾಯಿದೆ ಭಂಗ ಚಳುವಳಿಯು ನೀರಸಗೊಂಡು ನಿಸ್ತೇಜವಾತಾವರಣಕ್ಕೆ ಕಾರಣವಾದುದನ್ನು ಪುನಶ್ಚೇತನಗೊಳಿಸುವಂತೆ ಪ್ರೇರೇಪಿಸಿದ್ದ ಗಾಂಧೀಜಿಯವರ ಈ ಪ್ರವಾಸವು ಹರಿಜನರ ಸಮಸ್ಯೆಗಳನ್ನು ಕೇಂದ್ರದಲ್ಲಿರಿಸಿಕೊಂಡು ಹಲವು ರೀತಿಯಲ್ಲಿ ಹೊಸಪೇಟೆಯ ನಾಯಕರ ಗಣಗಣಗಳನ್ನು ನಿರ್ಮಿಸಿಕೊಂಡು ಜನಸ್ಪಂದನ ಕಾರ್ಯಕ್ರಮಗಳನ್ನು ಯೋಜಿಸಿದರು. ೧೯೩೪ರಿಂದ ಆರಂಭಗೊಂಡ ಉತ್ಸಾಹವು ೧೯೪೨ರ ನಿರ್ಣಾಯಕ ಚಳುವಳಿಯವರೆಗೆ ಹೊಸಪೇಟೆಯು ನಿರಂತರವಾದ ಕ್ರಿಯಾಶೀಲತೆಯಲ್ಲಿದ್ದುದು ವಿಶೇಷ.



ಸಾಮೂಹಿಕ ಚಳುವಳಿಯ ಜೊತೆಜೊತೆಗೆ 'ವ್ಯಕ್ತಿ ಸತ್ಯಾಗ್ರಹ'ವನ್ನು ಎಲ್ಲಾ ವಲಯಗಳಲ್ಲಿ ರೂಪಿಸಿ ಕ್ರಿಯಾಶೀಲಗೊಳಿಸಿದ್ದು ವಿಶೇಷವಾಗಿತ್ತು. ೧೯೪೦–೪೧ರಲ್ಲಿ ಮಹಾತ್ಮ ಗಾಂಧೀಜಿಯವರು ನೀಡಿದ ಕರೆಯೂ ಅದೇ ಆಗಿತ್ತು. ದೇಶದ ಪ್ರತಿಯೊಬ್ಬ ಭಾರತೀಯನೂ ವ್ಯಕ್ತಿ ಪರಿಮಿತಿಯಿಂದ ಸಾಮೂಹಿಕ ಪರಿಮಿತಿಯವರೆಗೆ ದೇಶಾಭಿಮಾನ, ಸ್ವಾತಂತ್ರ್ಯದ ಚಿಂತನೆ ಮೂಡಿಸಿಕೊಂಡು ಬ್ರಿಟೀಶ್ ಸರಕಾರಕ್ಕೆ ಬಿಸಿ ಮುಟ್ಟಿಸಬೇಕು ಎಂದು ರಾಷ್ಟ್ರನಾಯಕರ ಚಿಂತನೆಯಾಗಿತ್ತು. ಇದಕ್ಕೆ ದೇಶ ಪೂರ್ಣಪ್ರಮಾಣದಲ್ಲಿ ಪ್ರತಿಸ್ಪಂದಿಸಿತ್ತು. ಹೊಸಪೇಟೆಗೆ ಸಂಬಂಧಿಸಿದಂತೆ ಹೇಳಬಹುದಾದರೆ, ಮನೆಯ ಹೆಂಗಸರು ತಮ್ಮ ಪರಿಮಿತಿಯಲ್ಲಿ ಗಂಡಸರಿಗೆ ಬೆಂಬಲ, ಸಹಕಾರ ಮತ್ತು ರಕ್ಷಣೆ ನೀಡಿದ್ದರು.

ಹೊಸಪೇಟೆಯ ತಾಲೂಕು ಕಛೇರಿಯ ಮುಂಭಾಗದ ಒಳ ಆವರಣದಲ್ಲಿ ಆಯ್ದ ನಾಯಕರು, ಕಾಂಗ್ರೆಸ್ ಕಾರ್ಯಕರ್ತರು ಬಹಿರಂಗವಾಗಿ ಬ್ರಿಟೀಶ್ ಆಡಳಿತ ನೀತಿಯನ್ನು ವಿರೋಧಿಸುತ್ತ, ದೇಶದ ರಾಷ್ಟ್ರನಾಯಕರ ಪರ ಜಯಘೋಷ ಮಾಡಿ ಬಂಧನಕ್ಕೊಳಗಾಗುವುದು, ಇದು ವ್ಯಕ್ತಿ ಸತ್ಯಾಗ್ರಹ ವಾಗುವುದರ ಜೊತೆಗೆ ಸಾರ್ವಜನಿಕವಾಗಿ ತಮ್ಮ ದೇಶದ ಬಗೆಗಿನ ಬದ್ಧತೆಯನ್ನು ಪ್ರಕಟ ಮಾಡುತ್ತಿದ್ದರು. ಮಾನಸಿಕ ಜಡತೆಯನ್ನು ನಿರ್ಮೂಲನ ಮಾಡುವುದು ಸಹಾ ಈ ರೀತಿಯ ಬಹಿರಂಗ ಚಟುವಟಿಕೆಯ ಉದ್ದೇಶವಾಗಿತ್ತು. ಬ್ರಿಟೀಶ್ ಸರಕಾರ ಜಾಗತಿಕ ಯುದ್ಧ ಸಂದರ್ಭದಲ್ಲಿ ತಾನು ಪಾಲ್ಗೊಂಡು ಅನುಭವಿಸಿದ ನಷ್ಟವನ್ನು ಭಾರತ ದೇಶದ ಮೇಲೆ ಹಾಕುತ್ತಿದ್ದುದನ್ನು ಈ ಸಂದರ್ಭದಲ್ಲಿ ವಿರೋಧದ ಮೂಲಕ ವ್ಯಕ್ತಪಡಿಸುತ್ತಿದ್ದರು. ದೇಶದ ನಾಯಕರ ಅಭಿಪ್ರಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ, ದೇಶದ ಜನತೆಯ ಬದುಕಿನ ಸ್ಥಿತಿಗತಿಗಳನ್ನು ಪರಾಮರ್ಶಿಸದೇ ಬ್ರಿಟೀಶ್ ಸರಕಾರ ಏಕಪಕ್ಷೀಯವಾಗಿ ತೆಗೆದುಕೊಂಡಿದ್ದ ನಿರ್ಧಾರವನ್ನು ರಾಷ್ಟ್ರನಾಯಕರು ದೇಶಕ್ಕೆ, ದೇಶದ ಜನತೆಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದುದು ಬ್ರಿಟೀಶ್ ಆಳ್ವಿಕೆಗೆ ಭಯವನ್ನು, ಆತಂಕವನ್ನು ತಂದಿತ್ತು.

ವ್ಯಕ್ತಿ ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾದ ಬಳ್ಳಾರಿ ಜಿಲ್ಲೆಯ ಸತ್ಯಾಗ್ರಹಿಗಳನ್ನು ಇಲ್ಲಿ ದಾಖಲಿಸಬಹುದು.

ಬಿ.ಎಂ.ಅಜ್ಜಯ್ಯ (ಬೆಣೆಕಲ್, ಹಗರಿಬೊಮ್ಮನಹಳ್ಳಿ), ಅಡವಿಗೌಡ (ಕೊಟ್ಟೂರು, ಕೂಡ್ಲಿಗಿ), ಗುರುಲಿಂಗಪ್ಪ ಟಿ.ಎಸ್. (ಕೊಟ್ಟೂರು, ಕೂಡ್ಲಿಗಿ), ಬಸವನಗೌಡ ಟಿ. (ಕೊಟ್ಟೂರು, ಕೂಡ್ಲಿಗಿ), ರಾಮಶೆಟ್ಟಿ ಎಸ್. (ಕೊಟ್ಟೂರು, ಕೂಡ್ಲಿಗಿ), ಗೊರ್ಲಿ ಶರಣಪ್ಪ (ಕೊಟ್ಟೂರು, ಕೂಡ್ಲಿಗಿ), ಹನುಮಂತಪ್ಪ ಚಲವಾದಿ (ಕೊಟ್ಟೂರು, ಕೂಡ್ಲಿಗಿ), ಕಲ್ಗಣಿ ಶಿವರುದ್ರಪ್ಪ (ಬಳ್ಳಾರಿ), ರಾಮಾಚಾರ್ಯ ಎಸ್.ಕೆ. (ಬಳ್ಳಾರಿ), ಬಡರತ್ತಿ ವೆಂಕೋಬರಾವ್ (ಬಳ್ಳಾರಿ), ಹಾಲಹರವಿ ಸೀತಾರಾಮರೆಡ್ಡಿ (ಬಳ್ಳಾರಿ), ಎಸ್.ವಿ.ದೇಸಾಯಿ (ಶಂಕರಲಿಂಗ ಆಶ್ರಮ, ಅರಸೀಕೆರೆ, ಹರಪನಹಳ್ಳಿ), ಪಿ. ಸಿದ್ಧಪ್ಪ (ಕಂಟಿಕೆರೆ), ಸಿದ್ಧಪ್ಪ ಮಡಿವಾಳ (ಹರಾಳು, ಕೂಡ್ಲಿಗಿ), ರೇವಪ್ಪ ಹರಾಳು (ಹರಾಳು, ಕೂಡ್ಲಿಗಿ) ಬಸವನಗೌಡ ದೇಸಾಯಿ (ಹರಾಳು, ಕೂಡ್ಲಿಗಿ), ಬಸಪ್ಪ ಎಸ್. ಮಾಲಹಳ್ಳಿ (ಹರಾಳು, ಕೂಡ್ಲಿಗಿ), ನೆಲಕುದ್ರಿ ರೇವಪ್ಪ (ಹರಾಳು, ಕೂಡ್ಲಿಗಿ), ಕಜ್ಜಿ ಸಣ್ಣಲಿಂಗಪ್ಪ (ಕೂಡ್ಲಿಗಿ), ಕೊಟ್ಟೂರು ಮಾದೇವಪ್ಪ ದಾಸನಪುರ (ಕೂಡ್ಲಿಗಿ), ಮುದುಕಪ್ಪ ಬಿ. ದಾಸನಪುರ (ಕೂಡ್ಲಿಗಿ), ಕೊಂಡರೆಡ್ಡಿ ಎ. ಕಣೇಕಲ್ಲು (ಕೂಡ್ಲಿಗಿ), ಗೆಣಕಿಹಾಳ್ ಭೀಮಪ್ಪ ರಾಮಸಾಗರ (ಹೊಸಪೇಟೆ), ಡಾ. ಆರ್. ನಾಗನಗೌಡ (ಹೊಸಪೇಟೆ), ದಳವಾಯಿ ಅಂಬಣ್ಣ (ಅನಂತಶಯನ ಗುಡಿ), ಪಾಟೀಲ ಮರಿಸ್ವಾಮಯ್ಯ ಮಠದ (ಅನಂತಶಯನ ಗುಡಿ), ಬೂದಿಹಾಳ ಅನಂತಾಚಾರ್ (ಹೊಸಪೇಟೆ), ಬೆಲ್ಲದ ಚೆನ್ನಪ್ಪ (ಚಿತ್ತವಾಡಿಗಿ), ಪತ್ತಿಕೊಂಡ ಗುರುನಾಥಪ್ಪ ಶೆಟ್ಟಿ (ಹೊಸಪೇಟೆ) ಮತ್ತು ಮೊದಲಾದವರು. ಬಳ್ಳಾರಿ ತಾಲೂಕಿನ ಗ್ರಾಮೀಣ ಭಾಗದ ಎಮ್ಮಿಗನೂರು ಎಂಬ ಚಿಕ್ಕ ಗ್ರಾಮದಲ್ಲಿ 'ಸತ್ಯಾಗ್ರಹಗಳ ತಂಡ'ವೇ ಸಿದ್ಧವಾಗಿತ್ತು.

* * *

ಭಾರತ ದೇಶವು ತನ್ನ ಹೋರಾಟವನ್ನು ನಿರ್ಣಾಯಕ ಘಟ್ಟಕ್ಕೆ ತಂದು ನಿಲ್ಲಿಸಿತ್ತು! ೧೯೨೦–೨೧ರ ಅಸಹಕಾರ ಚಳುವಳಿ, ೧೯೩೦–೩೧ರ ಸವಿನಯ ಕಾನೂನು ಭಂಗ ಚಳುವಳಿಗಳು ಒಂದು ಹಂತ ತಲುಪಿದ್ದವು. ದೇಶವಾದರೂ ಮತ್ತೊಂದು ಹಂತವನ್ನು ಕೊನೆಯ ಹಂತವಾಗಿರಿಸಬೇಕೆಂದು ತೀರ್ಮಾನಿಸಿತ್ತು. ಅದು ೧೯೪೨ "ಬ್ರಿಟೀಶರೇ ಭಾರತ ಬಿಟ್ಟು ತೊಲಗಿ ಚಳುವಳಿ(ಕ್ವಿಟ್ ಇಂಡಿಯಾ)ಯು "ಮಾಡು ಇಲ್ಲವೇ ಮಡಿ" ಘೋಷಣೆಯಲ್ಲಿ ಆರಂಭವಾಯಿತು.



೧೯೪೨ ಆಗಸ್ಟ್ ೦೯ ರಂದು ಮಹಾತ್ಮಾ ಗಾಂಧೀಜಿಯವರು ಮುಂಬಯಿಯ ಕ್ರಾಂತಿ ಮೈದಾನದಲ್ಲಿ ಈ ಘೋಷಣೆಯನ್ನು ದೇಶವೇ ಕೇಳುವಂತೆ ಕೂಗಿದರು! ಬ್ರಿಟೀಶ್ ಆಳ್ವಿಕೆಯು ಜಾಗತಿಕ ಮಟ್ಟದಲ್ಲಿ ತಾನು ಮಾಡುತ್ತಿದ್ದ ಪ್ರಮಾದಗಳನ್ನು ಭಾರತದ ಜನತೆಯ ಮೇಲೆ ಹೇರುತ್ತಿದ್ದುದು ವಿಪರ್ಯಾಸವಾಗಿತ್ತು.

ಯುದ್ಧ ಮೊದಲಾದ ಅಂತರರಾಷ್ಟ್ರೀಯ ಪ್ರಮಾದಗಳಿಗೆ ಭಾರತವನ್ನು ಬಲಿಕೊಡುವ ಉದ್ದೇಶ ಬ್ರಿಟೀಶ್ ಆಳ್ವಿಕೆಯದಾಗಿತ್ತು. ಇದರಿಂದ ರಾಷ್ಟ್ರೀಯ ನಾಯಕರೂ ಮತ್ತು ರಾಷ್ಟ್ರದ ಜನತೆ ತಮ್ಮ ಬದುಕಿನ ಕೊನೆಯ ಹಂತದ ಹೋರಾಟ ಮಾಡಬೇಕಾಗಿದೆ ಎಂಬ ನಿಲುವಿಗೆ ಬದ್ಧರಾಗಿದ್ದರು. ೧೯೪೨ ಆಗಸ್ಟ್ ೯ರಂದು "ಮಾಡು ಇಲ್ಲವೆ ಮಡಿ" ಘೋಷಣೆಯಾಗುತ್ತಿದ್ದಂತೆ, ರಾಷ್ಟ್ರೀಯ ನಾಯಕರು ಬಂಧನಕ್ಕೊಳಗಾದರು. ದೇಶದಲ್ಲಿ ಹೋರಾಟ ಉಲ್ಬಣಗೊಂಡಿತು. ಕರ್ನಾಟಕದಲ್ಲಿ ಇಡೀ ಜನತೆಯು ಬ್ರಿಟೀಶರ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿತು. ಪೊಲೀಸ್ ಠಾಣೆ, ರೇಲ್ವೆ ನಿಲ್ದಾಣ, ಅಂಚೆ ಕಛೇರಿ, ದೂರವಾಣಿ ಸಂಪರ್ಕ, ಸೇತುವೆ ಮೊದಲಾದವುಗಳು ಚಳುವಳಿಗಾರರ ಆಕ್ರೋಶಕ್ಕೆ ಗುರಿಯಾಯಿತು.

ಈ ಚಳುವಳಿಯಲ್ಲಿ ವಿದ್ಯಾರ್ಥಿಗಳು ಅದ್ವಿತೀಯ ಪಾತ್ರವಹಿಸಿದರು. ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆಯು ಈ ಸಂದರ್ಭದಲ್ಲಿ ಗಮನ ಸೆಳೆಯಿತು. ಹೊಸಪೇಟೆಯ ಮುನ್ಸಿಪಲ್ ಹೂಸ್ಕೂಲಿನಲ್ಲಿದ್ದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪಾಲಕರ–ಪೋಷಕರ ಮಾತನ್ನು ಕೇಳದೆ ಚಳುವಳಿಯಲ್ಲಿ ಪಾಲ್ಗೊಂಡರು. "ಮಾಡು ಇಲ್ಲವೇ ಮಡಿ" ಎಂಬ ಘೋಷಣೆಯನ್ನು ವಿಮರ್ಶಿಸಿ, ಹಳ್ಳಿ ಹಳ್ಳಿಗಳಲ್ಲಿ ವಿವರಿಸಿದರು. ಮುಖ್ಯನಾಯಕರು ಮತ್ತು ಕಾಂಗ್ರೆಸ್ ನಾಯಕರು, ವಿದ್ಯಾರ್ಥಿ ಮುಖಂಡರು ಭೂಗತರಾಗಿ ಕಾರ್ಯ ನಿರ್ವಹಿಸಿದರು.

"ಭಾರತ ಬಿಟ್ಟು ತೊಲಗಿ" ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆಯು ಮುಂಚೂಣಿಯಲ್ಲಿತ್ತು. 'ಕರ್ನಾಟಕ ಮಾದರಿ'ಗೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ "ಭಾರತ ಬಿಟ್ಟು ತೊಲಗಿ" ಚಳುವಳಿಯು ಜ್ವಲಂತ ನಿದರ್ಶನವಾಗಿತ್ತು. ಜಿಲ್ಲೆಯ ಹಳ್ಳಿ ಹಳ್ಳಿಗೂ ಗಾಂಧೀಜಿಯವರ ಮಂತ್ರವನ್ನು ಭಾವನಾತ್ಮಕವಾಗಿ ತಲುಪಿದರು.

ಹೊಸಪೇಟೆಯು ಈ ವಿಷಯದಲ್ಲಿ ಹಿಂದೆ ಬೀಳಲಿಲ್ಲ. ಮಹಾತ್ಮ ಗಾಂಧೀಜಿಯವರ ಕರೆ ಸ್ಫೂರ್ತಿದಾಯಕಗೊಳ್ಳಬೇಕೆಂಬ ಉದ್ದೇಶದಿಂದ – "ನಾನೊಂದು ಸಣ್ಣ ಮಂತ್ರವೊಂದನ್ನು ನಿಮಗೆ ನೀಡುತ್ತೇನೆ. ಇದನ್ನು ಮನಸ್ಸಿನಲ್ಲಿ ಅಚ್ಚೊತ್ತಿದ್ದಂತೆ ಇಟ್ಟುಕೊಳ್ಳಿ. ಉಸಿರಿಗೊಮ್ಮೆ ಮಂತ್ರವನ್ನು ಜಪಿಸುತ್ತಿರಿ. ಆ ಮಂತ್ರ ಯಾವುದೆಂದರೆ, "ಮಾಡು ಇಲ್ಲವೇ ಮಡಿ" ಒಂದೋ ದೇಶವನ್ನು ಪಾರತಂತ್ರ್ಯದಿಂದ ಬಿಡುಗಡೆಗೊಳಿಸಬೇಕು. ಇಲ್ಲವೇ ಆ ಪ್ರಯತ್ನದಲ್ಲಿ ಪ್ರಾಣಿಬಲಿಯಾಗಬೇಕು. ಪ್ರತಿಯೊಬ್ಬರೂ ಸ್ತ್ರೀಯರು–ಪುರುಷರು ಈ ಕ್ಷಣದಿಂದ ಸ್ವತಂತ್ರರೆಂದು ಭಾವಿಸಿಕೊಳ್ಳಿ. ವಸಾಹತುಶಾಹಿಯ ಭಯವನ್ನು ತೊರೆದು ಮುಕ್ತವಾಗಿ ಬದುಕು ನಡೆಸಿ"– ಹೇಳಿದ್ದ ಮಾತನ್ನು ಕರಪತ್ರಗಳಲ್ಲಿ ಮುದ್ರಿಸಿ, ಕೈ ಬರೆಹಗಳಲ್ಲಿ ಪ್ರತಿಮಾಡಿಸಿ ಗ್ರಾಮೀಣ ಭಾಗವೂ ಸೇರಿದಂತೆ ಎಲ್ಲೆಡೆ ತಲುಪಿಸಿದರು. ಈ ಸಂದರ್ಭದಲ್ಲಿ ಹೊಸಪೇಟೆಯು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಿತ್ತು.

೧೧ರ ಆಗಸ್ಟ್ (೧೯೪೨) ದಿನದಂದು ಹೊಸಪೇಟೆಯಲ್ಲಿ ಕೋರಿಶೆಟ್ಟಿ ಜಂಬಣ್ಣ, ರಾರಾವಿ ವೀರಣ್ಣ, ಅಸುಂಡಿ ತಿರುಮಲರಾವ್, ಕಟ್ಟಿ ಶ್ರೀನಿವಾಸಾಚಾರ್, ಹಿಂಡಿ ಸಿದ್ಧಪ್ಪ, ಗಣಪತೆಪ್ಪ, (ಬೆಲ್ಲದ ಚೆನ್ನಪ್ಪ, ಜಿ.ಬಿ. ಗದಿಗೆಪ್ಪ) ಮೊದಲಾದವರು ವಿದ್ಯಾರ್ಥಿಗಳಾಗಿದ್ದವರು. ಶಾಲೆಯನ್ನು ಬಹಿಷ್ಕರಿಸಿ ಹರತಾಳ ಆಚರಿಸಿದರು. ಹೊಸಪೇಟೆ ತಾಲೂಕಿನ ಹಳ್ಳಿ ಗ್ರಾಮಗಳಿಗೆ ಹೋಗಿ ಇವರೆಲ್ಲ ಭಾಷಣ ಮಾಡಿ ದೇಶದ ಪರಿಸ್ಥಿತಿಯನ್ನು ಪ್ರಕಟಪಡಿಸಿದರು. ವಲ್ಲಭಾಪುರ, ನಾರಾಯಣದೇವರ ಕೆರೆ, ತಂಬ್ರಹಳ್ಳಿ ಮೊದಲಾದ ಹಳ್ಳಿಗಳಲ್ಲಿ ಹೊಸಪೇಟೆಯ ಕೋರಿಶೆಟ್ಟಿ ಜಂಬಣ್ಣನವರ ತಂಡ ಯಶಸ್ವಿಯಾಗಿ ಜನಜಾಗೃತಿಯನ್ನುಂಟು ಮಾಡಿತು.

**ಹೊಸಪೇಟೆಯ ಮುನ್ಸಿಪಲ್ ಹೈಸ್ಕೂಲ್ ಕಟ್ಟಡಕ್ಕೆ ಬೆಂಕಿ:**

೧೯೪೨ರ "ಭಾರತ ಬಿಟ್ಟು ತೊಲಗಿ" ಚಳುವಳಿಗೆ ಸಂಬಂಧಿಸಿದಂತೆ ಸರಕಾರವು ತಯಾರಿಸಿದ್ದ ರಹಸ್ಯ ವರದಿಯಲ್ಲಿ ೧೪ರ ಸೆಪ್ಟಂಬರ್ ೧೯೪೨ರಂದು ಹೊಸಪೇಟೆಯ ಮುನ್ಸಿಪಲ್ ಹೈಸ್ಕೂಲ್ ಕಟ್ಟಡಕ್ಕೆ ಬೆಂಕಿ ಹಚ್ಚಿದ್ದ ಪ್ರಕರಣವು ದಾಖಲಾಗಿದೆ. ಈ ಪ್ರಕರಣದಲ್ಲಿ ಭಾಗಿಗಳಾಗಿದ್ದ ಹೊಸಪೇಟೆಯ ಸಜ್ಜೇದ ವೀರಣ್ಣನವರ ಪ್ರಕಾರ ಹೈಸ್ಕೂಲ್ ಕಟ್ಟಡಕ್ಕೆ ಬೆಂಕಿ ಹಚ್ಚುವ ಕೃತ್ಯದಲ್ಲಿ ಭಾಗಿಗಳಾಗಿದ್ದವರೆಂದರೆ ಕೋರಿಶೆಟ್ಟಿ ಜಂಬಣ್ಣ, ಎಸ್. ಗಣಪತಿ, ಜಿ. ನಾರಾಯಣಸ್ವಾಮಿ, ಬಿ. ವರ್ಧಮಾನ, ಜಿ. ವೆಂಕಣ್ಣ, ಡಿ. ಕೃಷ್ಣರಾವ್, ಎಚ್. ಕೊಟ್ರಪ್ಪ, ಆರ್. ಪಂಪಣ್ಣ, ಕೆ.ಹನುಮಂತ, ಇವರೆಲ್ಲರೂ ಸೇರಿಕೊಂಡು ಹೊಸಪೇಟೆಯಲ್ಲಿ ಅನೇಕ ವಿಧ್ವಂಸಕ ಕೃತ್ಯವೆಸಗಿದರು. ಇವರಲ್ಲಿ ಹೊಸಪೇಟೆ ಹೈಸ್ಕೂಲಿಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಶಿಕ್ಷೆಗೊಳಗಾದ ಸತ್ಯಾಗ್ರಹಿಗಳೆಂದರೆ ಸಜ್ಜೇದ ವೀರಣ್ಣ, ಬಿ. ವರ್ಧಮಾನ, ಆರ್. ಪಂಪಣ್ಣ, ಜಿ. ನಾರಾಯಣಸ್ವಾಮಿ, ಜಿ. ವೆಂಕಣ್ಣ, ಎಚ್. ಕೊಟ್ರಪ್ಪ ಮತ್ತು ಡಿ. ಕೃಷ್ಣರಾವ್. ಇವರೆಲ್ಲರೂ ಬಂಧಿತರೂ ಆಗಿ, ನಂತರ ತಮ್ಮ ಹೋರಾಟವನ್ನು ನಿರಂತರವಾಗಿರಿಸಿಕೊಂಡರು.

೧೯೪೨ರ ಚಳುವಳಿಯ ಪರಿಣಾಮವಾಗಿ ಬಳ್ಳಾರಿ ಜಿಲ್ಲೆಯ ನಾಯಕರೆಲ್ಲರ ಬಂಧನವಾಯಿತು. 'ಬಳ್ಳಾರಿ ಗಾಂಧಿ'ಯೆಂದೇ ಹೆಸರಾಗಿದ್ದ ಬಾದನಹಟ್ಟಿ ವೆಂಕೋಬರಾಯರನ್ನು ಒಳಗೊಂಡಂತೆ ಕೆ.ಚಿದಾನಂದ ಶಾಸ್ತ್ರಿ, ಆರ್. ಹನುಮಂತರಾವ್, ಟಿ.ಬಿ. ಕೇಶವರಾವ್ ಮೊದಲಾದವರು 'ಸಾಂಬಾಮೂರ್ತಿ ಮೈದಾನ'ದಲ್ಲಿ ರಾಷ್ಟ್ರ ಧ್ವಜಾರೋಹಣ (೨೬ ಜನವರಿ ೧೯೪೩) ಮಾಡಿ ಬಂಧಿತರಾದರು. ಅದೇ ರೀತಿಯಾಗಿ ವಿವಿಧ ಕಡೆಗಳಲ್ಲಿ ಎಸ್.ಕೆ. ರಾಮಾಚಾರ್, ಬಿ. ಉದ್ದಾನಪ್ಪ, ಡಿ.ಎಚ್. ಕೃಷ್ಣರಾವ್, ಡಿ. ರಾಮಮೂರ್ತಿ, ಡಾ. ಎಸ್. ವೆಂಕಟರಮಣ, ಎಂ. ಬಿಂದುಮಾಧವ, ಎಸ್. ನಾರಾಯಣರಾವ್ ಮುಂತಾದವರು ಬಂಧಿತರಾದರು.

ಅದೇ ರೀತಿಯಾಗಿ, ಹೊಸಪೇಟೆಯಲ್ಲಿ ಕಟ್ಟಿ ಶ್ರೀನಿವಾಸಾಚಾರ್ಯ, ಅಸುಂಡಿ ತಿರುಮಲರಾವ್, ಎಸ್.ವಿ. ದೇಸಾಯಿ, ಗೆಣಕಿಹಾಳು ಭೀಮಪ್ಪ, ದಳವಾಯಿ ಅಂಬಣ್ಣ, ವಿ. ಹನುಮಂತಪ್ಪ, ವಡಿಗೇರಿ ಲಿಂಗಪ್ಪ, ಹಿಂಡಿ ಸಿದ್ಧಪ್ಪ, ದಳವಾಯಿ ಭೀಮಣ್ಣ, ಕೋರಿಶೆಟ್ಟಿ ಜಂಬಣ್ಣ, ಕೆ. ಹನುಮಂತಪ್ಪ ಮೊದಲಾದವರು ಬಂಧನಕ್ಕೊಳಗಾದರು.

೧೯೪೨ರಲ್ಲಿ ಹೊಸಪೇಟೆಯಲ್ಲಿ ನಡೆದ ಕೆಲವು ಪ್ರಮುಖ ಚಟುವಟಿಕೆಗಳನ್ನು ಸಂಗ್ರಾಹ್ಯವಾಗಿ ಹೀಗೆ ಗಮನಿಸಬಹುದು. ಆಗಸ್ಟ್ ೧೦;

ಕಾಂಗ್ರೆಸ್ ನಾಯಕರನ್ನು ಬಂಧಿಸಿದ್ದನ್ನು ಪ್ರತಿಭಟಿಸಿ ಹೊಸಪೇಟೆಯ ಮುನ್ಸಿಪಲ್ ಹೈಸ್ಕೂಲಿನ ವಿದ್ಯಾರ್ಥಿಗಳಲ್ಲಿ ಅರ್ಧದಷ್ಟು ಸಂಖ್ಯೆಯಲ್ಲಿ ತರಗತಿಗಳನ್ನು ಬಹಿಷ್ಕರಿಸಿದರು. ಆಗಸ್ಟ್ ೧೬; ಹೊಸಪೇಟೆ ಮತ್ತು ಹುಬ್ಬಳ್ಳಿ ನಡುವಿನ ತಂತಿ ವ್ಯವಸ್ಥೆ ಕಿತ್ತು ಹಾಕಿ ಸಂಪರ್ಕ ಕಡಿದು ಹಾಕಲಾಯಿತು. ಸೆಪ್ಟಂಬರ್ ೩, ಹೊಸಪೇಟೆ–ಬಳ್ಳಾರಿ ಮಾರ್ಗದಲ್ಲಿ ಮೂರು ಸೇತುವೆಗಳನ್ನು ಮುರಿದು ಹಾಕಲಾಯಿತು. ಸೇತುವೆಗಳ ಸಂರಕ್ಷಿತ ಗೋಡೆಗಳನ್ನು ಉರುಳಿಸಲಾಯಿತು. ಸರಕಾರದ ಆಜ್ಞೆಗಳನ್ನು ಸರಕಾರಿ ಅಧಿಕಾರಿಗಳು ಪಾಲಿಸಬಾರದೆಂದು ಗಾಂಧೀಜಿ ಕರೆ ನೀಡಿದ್ದ 'ಹರಿಜನ' ಪತ್ರಿಕೆಯ ಪ್ರತಿಗಳನ್ನು ಸಿದ್ಧಪಡಿಸಿ ಅಧಿಕಾರಿಗಳಿಗೆ ಹಂಚಲಾಯಿತು. ಕಾಂಗ್ರೆಸ್‌ನ ವಾರ್ತಾಪತ್ರವನ್ನು ಹಂಚಲಾಯಿತು. ನವೆಂಬರ್೫; ಕರನಿರಾಕರಣೆ ಘೋಷಣೆ ಇದ್ದ ಕರಪತ್ರಗಳನ್ನು ಹಂಚಲಾಯಿತು.

ಈ ಚಳುವಳಿಯ ಸಂದರ್ಭದಲ್ಲಿ ಅನೇಕ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರ ಕಣ್ಣು ತಪ್ಪಿಸಿ ಭೂಗತರಾಗಿ ಚಳುವಳಿ ನಡೆಸಿದರು. ಬಳ್ಳಾರಿ ಜಿಲ್ಲೆಯಲ್ಲಿ ಅನೇಕರು ಭೂಗತ ಚಳುವಳಿಗಾರನಿಗೆ ಆಶ್ರಯ ನೀಡಿ ಸಹಕರಿಸಿದರು. ಹೊಸಪೇಟೆಯ ಬೆಲ್ಲದ ಚೆನ್ನಪ್ಪನವರ ದಲ್ಲಾಳಿ ಅಂಗಡಿಯು ಅಂತಹ ಒಂದು ಆಶ್ರಯ ತಾಣವಾಗಿತ್ತು. ಪೊಲೀಸರಿಗೆ ಅನುಮಾನ ಬಾರದಂತೆ ಇವರು ಭೂಗತ ಚಳುವಳಿಗಾರರಿಗೆ ಆಶ್ರಯ ನೀಡುತ್ತಿದ್ದರು. ಭೂಗತ ಚಳುವಳಿಗಾರರ ಪ್ರಯಾಣಕ್ಕೆ ವ್ಯವಸ್ಥೆ ಮಾಡುತ್ತಿದ್ದರು.

* * *

ಸ್ವದೇಶಿ ಚಿಂತನೆ, ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರಭಕ್ತಿ ಬದುಕಿನ ಧಾತುವಾಗಿ ಅವ್ಯಾಹತಗೊಂಡಿದ್ದ ಸಂದರ್ಭದಲ್ಲಿಯೇ ಹೊಸಪೇಟೆಯ ಪ್ರಜ್ಞಾವಂತರೂ ನಾಗರಿಕ ಪ್ರಜ್ಞೆಯುಳ್ಳ ಯುವಕರೂ ಸೇರಿ 'ಸ್ವದೇಶಿ ಹೈಸ್ಕೂಲ್'ನ್ನು ಸ್ಥಾಪಿಸಿದ್ದರು. ಸ್ವಾತಂತ್ರ್ಯಾಪೇಕ್ಷೆಯ ಅನುಬಂಧದಲ್ಲಿ ಈ ಶಾಲೆ ಆರಂಭಗೊಂಡಿತ್ತು. ಹೊಸಪೇಟೆ ನಗರದಲ್ಲಿ ಮುಂಚೂಣಿಯಲ್ಲಿದ್ದ ಅಸುಂಡಿ ಭೀಮರಾವ್, ಸರ್ವಜ್ಞಾಚಾರ್, ತಟ್ಟಿಕೃಷ್ಣರಾವ್, ಬೂದಿಹಾಳು ಅನಂತಾಚಾರ್ ಮೊದಲಾದವರ ನಾಯಕತ್ವದಲ್ಲಿ ೧೯೨೧ರಲ್ಲಿ 'ಸ್ವದೇಶಿ ಹೈಸ್ಕೂಲ್' ಪ್ರಾರಂಭವಾಯಿತು. ಅಂದು ಸ್ವದೇಶಿ ಶಾಲೆಗಳು ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡುವ ಶೈಕ್ಷಣಿಕ ಕೇಂದ್ರಗಳಾಗಿದ್ದವು. ಸ್ವದೇಶಿ ಹೈಸ್ಕೂಲ್ ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳನ್ನು ಹೇಳಿಕೊಡುತ್ತಿತ್ತು. ಕನ್ನಡ ನಾಡಿನ ಏಕೀಕರಣದ ವಿಚಾರದಲ್ಲಿ ಹೊಸಪೇಟೆಯಲ್ಲಿ ನಡೆಸುತ್ತಿದ್ದ ಈ ಶಾಲೆಯು ಕನ್ನಡಕ್ಕೆ ಪ್ರಾಧಾನ್ಯತೆ ನೀಡಿದ್ದು ಘನವಾದ ವಿಚಾರವಾಗಿತ್ತು. ಮದ್ರಾಸ್ ಪ್ರಾವೆನ್ಸಿಗೆ ಸೇರಿದ್ದ ಬಳ್ಳಾರಿ ಜಿಲ್ಲೆಯಲ್ಲಿ ಮನೆಯಲ್ಲಿ ಮಾತ್ರ ಕನ್ನಡ ಉಸಿರಾಡುತ್ತಿತ್ತು. ಶಾಲೆಗಳಲ್ಲಿ ತೆಲುಗು, ಕಛೇರಿಗಳಲ್ಲಿ ತಮಿಳು, ಹಿಂದಿ, ಇಂಗ್ಲಿಷ್ ಇರುತ್ತಿತ್ತು. ತೆಲುಗುಮಯವಾಗಿದ್ದು ಶೈಕ್ಷಣಿಕ ಮಾಧ್ಯಮವಾಗಿದ್ದ ತೆಲುಗು ಸಂಚಾರಗೊಂಡಿದ್ದಾಗ, ಹೊಸಪೇಟೆಯ 'ಸ್ವದೇಶಿ ಹೈಸ್ಕೂಲ್' ಒಂದು ರೀತಿಯಲ್ಲಿ ಭರವಸೆ ಆತ್ಮವಿಶ್ವಾಸಗಳನ್ನುಂಟು ಮಾಡಿತ್ತು. ಕಟ್ಟಿ ಶ್ರೀನಿವಾಸಾಚಾರ್ ಇದೇ ಶಾಲೆಯಲ್ಲಿ ಓದಿದ ಪ್ರತಿಭಾವಂತ ವಿದ್ಯಾರ್ಥಿ ಗಳಲ್ಲೊಬ್ಬ. (ಕ್ರಮೇಣ ಜನತೆಯ ಆಸಕ್ತಿ, ಅಪೇಕ್ಷೆಗಳು ಬದಲಾದಂತೆ ಸ್ವದೇಶಿ ಸ್ಕೂಲ್ ಬೆಂಬಲವಿಲ್ಲದೆ ೧೯೨೫ರಲ್ಲಿ ಸ್ಥಗಿತಗೊಂಡಿತು)



ಇದೇ ಸಂದರ್ಭದಲ್ಲಿ ಮತ್ತೊಂದು ಪ್ರಯೋಗವನ್ನು ದಾಖಲಿಸಲೇ ಬೇಕು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರೀಯ ಸಂಘಟನೆಯಾಗಿದ್ದ ಕಾಂಗ್ರೆಸ್ ಜೊತೆಗೆ ಗುರುತಿಸಿಕೊಳ್ಳಲು ಖಾದಿ ಬಟ್ಟೆಯನ್ನು ಒಂದು ಅಸ್ಮಿತೆಯಾಗಿ ಬಳಸಿಕೊಳ್ಳಲು ಯೋಚನೆಯಿತ್ತು. ಖಾದಿ ಧರಿಸುವುದರ ಮೂಲಕ ದೇಶದ ಪ್ರಮುಖ ವಿದ್ಯಮಾನದೊಂದಿಗೆ ಪಾಲ್ಗೊಳ್ಳುವ ಸಾಮಾಜಿಕ ಮನ್ನಣೆ ಪ್ರಾಪ್ತವಾಗುತ್ತಿತ್ತು. ಆದರೆ, ಆ ಕಾಲದಲ್ಲಿ ಬಟ್ಟೆಯ ತೊಂದರೆಯಿತ್ತು. ಹೊಸಪೇಟೆಯಲ್ಲಿಯೂ ಖಾದಿ ಬಟ್ಟೆಯೇ ದೊರೆಯುತ್ತಿರಲಿಲ್ಲ. ಬೇರೆ ಸ್ಥಳಗಳಿಂದ ಖಾದಿಯನ್ನು ತರಿಸಿಕೊಳ್ಳಬೇಕಾಗಿತ್ತು. ಈ ಸಮಸ್ಯೆಯ ನಿವಾರಿಸಲು ಬೆಲ್ಲದ ಚೆನ್ನಪ್ಪ ಮತ್ತು ಪತ್ತಿಕೊಂಡ ಗುರುನಾಥಪ್ಪ ಶೆಟ್ಟಿಯವರು ಕೂಡಿ ಮೂರು ನೂರು ರೂಪಾಯಿಗಳ ಬಂಡವಾಳದಲ್ಲಿ ಹೊಸಪೇಟೆಯಲ್ಲಿ ಖಾದಿ ಬಟ್ಟೆ ಮಾರಾಟದ ಒಂದು ಮಳಿಗೆಯನ್ನು ಗೊತ್ತು ಮಾಡಿದರು.

ಬೆಲ್ಲದ ಚನ್ನಪ್ಪ ಮತ್ತು ಕೃಷಿತಜ್ಞರೂ ರಾಜಕಾರಣಿಯೂ ಆಗಿದ್ದ ಡಾ. ಆರ್. ನಾಗನಗೌಡರೂ ಹೊಸಪೇಟೆಯಲ್ಲಿಯೇ ಖಾದಿ ಬಟ್ಟೆ ತಯಾರಿಸುವುದರ ಬಗ್ಗೆ ಯೋಚಿಸಿ ಅದರ ಯೋಜನೆಗೆ ಬೆಲ್ಲದ ಚನ್ನಪ್ಪನವರು ಒಂದು ಸಾವಿರ ರೂಪಾಯಿಗಳನ್ನು ಮುಡುಪಾಗಿಟ್ಟರು. ಆ ಕಾಲದಲ್ಲಿ ಹೊಸಪೇಟೆ ಖಾದಿ

ನೂಲುವ ನೇಕಾರರಿರಲಿಲ್ಲ. ಕೊಪ್ಪಳದ ಅಗಡಿ ಸಂಗಣ್ಣನವರ ಸಹಕಾರದಿಂದ ಮುದ್ದಾಬಳ್ಳಿ ಎಂಬ ಗ್ರಾಮದಲ್ಲಿ ನೂಲು ತೆಗೆಯುವ ಜನರನ್ನು ಸಂಪರ್ಕಿಸಲಾಯಿತು. ಒಳ್ಳೆಯ ಗುಣಮಟ್ಟದ ನೂಲು ತೆಗೆದು ಕೊಡುವಂತೆ ಅವರಿಗೆ ಒತ್ತಾಯಿಸಲಾಯಿತು. ಇದಕ್ಕಾಗಿ ಹೆಚ್ಚಿನ ಕೂಲಿ ಕೊಡುವ ಭರವಸೆ ನೀಡಲಾಯಿತು. ಮುದ್ದಾಬಳ್ಳಿಯಿಂದ ನೂಲನ್ನು ಹೊಸಪೇಟೆಗೆ ತರಿಸಿಕೊಂಡು ನಲವಗಿ ರಾಮಚಂದ್ರಪ್ಪನವರು ತಾವೂ ತರಿಸಿದ ನೂಲಿನಿಂದ ಬಟ್ಟೆ ನೇಯ್ದು ಕೊಡುತ್ತಿದ್ದರು. ಇಲ್ಲಿ ನಡೆಯುತ್ತಿದ್ದ ವ್ಯವಹಾರಿಕ ಚಿಂತನೆಯನ್ನು ತಡೆದು ದೇಶದ ಬಹುಮುಖ್ಯ ಕಾರ್ಯದಲ್ಲಿ ಎಲ್ಲರೂ ಪಾಲ್ಗೊಳ್ಳುವ ನಿಟ್ಟಿನಲ್ಲಿ ಉತ್ತಮ ದರ್ಜೆಯ ಖಾದಿ ಬಟ್ಟೆಯನ್ನು ಸರಬರಾಜು ಮಾಡಬೇಕಾಗಿತ್ತು. ವ್ಯಾಪಾರದ ದೃಷ್ಟಿಯಿಂದಾಗಲೀ, ಮೋಸ ಮಾಡುವ ವಿಚಾರವಾಗಲೀ ಖಾದಿ ಬಟ್ಟೆಯ ವಿಷಯದಲ್ಲಿ ಮಾಡುವಂತಿರಲಿಲ್ಲ. ಏಕೆಂದರೆ, ಖಾದಿ ಬಟ್ಟೆಗೆ ಕಾಂಗ್ರೆಸ್ ಸಮಿತಿಯು ಪ್ರಮಾಣ ಪತ್ರವನ್ನು ನೀಡುವಂತಿರಲಿಲ್ಲ. ೧೯೩೦–೩೧ರ ಸಾಲಿನಲ್ಲಿ ಹೊಸಪೇಟೆಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದ ತಟ್ಟೆ ಕೃಷ್ಣರಾವ್ ಅವರು ಕಾರ್ಯ ನಿರ್ವಹಿಸುತ್ತಿದ್ದರು. ಇವರು ಬೆಲ್ಲದ ಚೆನ್ನಪ್ಪನವರು ತಯಾರಿಸುತ್ತಿದ್ದ ಖಾದಿ ಬಟ್ಟೆಗೆ ಪ್ರಮಾಣ ಪತ್ರ ನೀಡಲು ಸತಾಯಿಸುತ್ತಿದ್ದರಂತೆ!

* * *

**ಕೊನೆಯ ಮಾತು!**

ಒಟ್ಟಿನಲ್ಲಿ ೧೮೫೫–೬೦ರ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ಕೇಂದ್ರದಲ್ಲಿ ಮುಂಡರಗಿ ಭೀಮರಾಯನಿಂದ ಆರಂಭಗೊಂಡ ವ್ಯವಸ್ಥೆಯ ವಿರುದ್ಧದ ನಿಲುವನ್ನು ೧೯೪೭ ಆಗಸ್ಟ್ ೧೫ ರವರೆಗೆ ಜೀವಂತವಾಗಿಯೂ ರಚನಾತ್ಮಕವಾಗಿಯೂ ಇರಿಸಿಕೊಂಡಿದ್ದು ವಿಶೇಷ.

ದೇಶದ ಪ್ರಮುಖ ವಿದ್ಯಮಾನಗಳಿಗೆ ಅಂದರೆ, ೧೮೮೫ರಲ್ಲಿ ರಾಷ್ಟ್ರೀಯ ಸಂಘಟನೆಯಾಗಿ ಕಾಂಗ್ರೆಸ್ ರಚನೆ–ಸ್ಥಾಪನೆಯ ಸಂದರ್ಭದಲ್ಲಿ ಬಳ್ಳಾರಿ ಹೊಸಪೇಟೆ ಭಾಗವಹಿಸಿದ್ದು ಮತ್ತು ಹೊಸಪೇಟೆ ಮೂಲದ ಬಳ್ಳಾರಿಯ ವಾಸಿಯಾಗಿದ್ದ ಕೋಲಾಚಲಂ ವೆಂಕಟರಾವ್ ಅವರನ್ನು "ಬಳ್ಳಾರಿ ಜಿಲ್ಲೆಯ



ಸ್ವಾತಂತ್ರ್ಯ ಹೋರಾಟದ ಪಿತಾಮಹ" ಎಂದು ಕರೆಯುತ್ತಿರುವುದು ವಿಶಿಷ್ಟ ಮಹತ್ವವನ್ನು ಪಡೆಯುತ್ತದೆ. ಜೊತೆಗೆ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದಂತೆಯೂ ಹೇಳಬಹುದಾದ ಮುಖ್ಯ ವಿಚಾರವೆಂದರೆ ರಾಷ್ಟ್ರೀಯ ಭಾವೈಕ್ಯತೆಗೆ ಸಂಕೇತವಾಗಿರುವುದು. ಸ್ವಾತಂತ್ರ್ಯ ಹೋರಾಟವನ್ನು ನೆಪವಾಗಿರಿಸಿಕೊಂಡು ಜಾತ್ಯತೀತವಾಗಿಯೂ ಸಮತಾ ನೆಲೆಯಲ್ಲಿಯೂ ಗುರುತಿಸಿಕೊಂಡಿದ್ದು ಬಳ್ಳಾರಿ ಜಿಲ್ಲೆಯ ಮತ್ತು ಹೊಸಪೇಟೆ ತಾಲೂಕಿನ ಬಹುಮುಖ್ಯ ಕೊಡುಗೆಯಾಗಿದೆ.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

೫೬ / ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ – ಹೊಸಪೇಟೆ

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |